ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾವಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K·R·N·N· 240 ಸಂಪುಟ : 1 ಸಂಚಿಕೆ : 11 ಸೆಪ್ಟೆಂಬರ್ 1 ರಿಂದ 15, 1997 ಪುಟಗಳು : 24 ರೂ. 5.



ವಿಘ್ನ ನಿವಾರಕ ವಿಘ್ನೇಶ್ವರನಿಗೆ ನಮೋ ನಮಃ



ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ರಮೇಶ್

ವರದಿಗಾರ :
ಪಟ್ಟಡ ಎಲ್. ಶಿವಕುಮಾರ್

ಕಛೇರಿ ನಿರ್ವಹಣೆ :
ಪಟ್ಟಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ
ಮಞ್ಞಪುರ ಧರಣಿ ಗಣಪತಿ

ಮುದ್ರಣ :
ಮಞ್ಞಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,
ವಿನಾಯಕನಗರ, ಮೈಸೂರು–12

ಗೌರವ ವ್ಯವಸ್ಥಾಪಕ :
ಪಟ್ಟಡ ಎಂ. ಪ್ರಭಾಕರ್

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 322, ಹಿನಕಲ್ ಗ್ರಾಮ ಮತ್ತು
ಅಂಚೆ [ಅರಳಿಕಟ್ಟೆ ಹತ್ತಿರ]
ಮೈಸೂರು–570 017.
ದೂರವಾಣಿ : 0821–516771

ಒಳನೋಟ

ಪುಟಗಳು

ಅರೆ ಭಾಷಿಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ :

ಸಂಘ ಸಂಸ್ಥೆಗಳು ಎಷ್ಟು ಉತ್ತಮ ಮಟ್ಟದಲ್ಲಿದೆ. ಎಂದು ತಿಳಿಯಲು ಅದರ ಲೆಕ್ಕ ಪತ್ರಗಳನ್ನು ನೋಡಿ ತಿಳಿದರೆ ಸಾಲದು. ಅದರಾಯ ಸಂಸ್ಥೆಗಳು ಹಲವು ಉತ್ತಮ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಾಗ, ಅದು ಸಾಮಾನ್ಯನ ಮನ ದಾಳಕ್ಕೆ ಹೋಗಿ ಅವನ ಪರಿವರ್ತನೆಗೆ ಅದು ಸಹಕರಿಸಬಹುದು. ಹೀಗಾದಾಗ ಹಮ್ಮಿಕೊಳ್ಳುವ ಕಾರ್ಯಕ್ರಮಕ್ಕೆ ಅರ್ಥ ಬರ ಬಹುದು. ಮೇಲಿನ ಮಾತನ್ನು ಇಲ್ಲಿ ಪ್ರಸ್ತಾಪಿಸಲು ನನ ಗೊಂದು ಅವಕಾಶ ದೊರೆತಿದೆ. ಇದೇ ತಿಂಗಳ ಮೊದಲನೆ ವಾರದಿಂದ ಕೊನೆಯ ವಾರದವರೆಗೆ [ಕೆಲವು ನಿರ್ದಿಷ್ಟ ದಿನ ಗಳಲ್ಲಿ] ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಕೈಲು ಮುಹೂರ್ತ ಸಲುವಾಗಿ ಎಲ್ಲರನ್ನು ಒಂದೆಡೆ ಸೇರಿಸಲು ನಿರ್ಧರಿ ಸಿದೆ. ಇಲ್ಲಿ ಆಟೋಟ, ಉದ್ಘಾಟನೆ, ಜನ್ಮಶತಾಬ್ದಿ ಹೀಗೆ ಹಲವು ಕಾರ್ಯಕ್ರಮದಡಿಯಲ್ಲಿ ನಮ್ಮ ಭಾಂದವರು ಸಾವಿ ರಾರು ಸಂಖ್ಯೆಯಲ್ಲಿ ಬಂದು ತಮ್ಮ ಎಲ್ಲಾ ಕೆಲಸ ಕಾರ್ಯಗಳಿಗೆ ವಿರಾಮ ಕೊಟ್ಟು ಸ್ನೇಹ ಹಸ್ತ ಬದಲಾಯಿಸುವ ಮೂಲಕ ಕುಳಿತು ಕಷ್ಟ ಸುಖವನ್ನು ಹಂಚಿಕೊಂಡು ನಗುಮುಖ ದೊಂದಿಗೆ ಬೀಳ್ಕೊಟ್ಟಾಗ ಇಂತಹ ಸಂದರ್ಭ ಮತ್ತೊಮ್ಮೆ ಬರಲಿ ಎಂದು ಮನದಾಳದಲ್ಲಿ ಮೂಡಿಬರುವುದು ಸಹಜ. ಹೀಗೆ ಇಂತಹ ಕಾರ್ಯ ಕ್ರಮಗಳನ್ನು ನಮ್ಮ ಸಮಾಜದ ಸಂಘ ಸಂಸ್ಥೆಗಳು ಹೆಚ್ಚು ಹೆಚ್ಚು ಹಮ್ಮಿಕೊಳ್ಳಲಿ ಎಂಬುದು ಸಂಗಾತಿಯ ಬಯಕೆಯಾಗಿದೆ.

ಕೈಲ್ ಪೊಳ್ದ್ ಹಬ್ಬ

ಈ ಹಬ್ಬವು ಪ್ರತಿ ವರ್ಷದ ಸೆಪ್ಟೆಂಬರ್ ತಿಂಗಳ 3ನೇ ದಿನಾಂಕದಂದು ಸಾಮಾನ್ಯವಾಗಿ ನಡೆಯುವುದು. ಅಂದರೆ ಸೋಣ್ತಂಗ 18ರಂದು ಆದರೆ ಕೆಲವರು ಸೋಣ್ತಂಗಳ 12ಕ್ಕೆ ಆಚರಿಸುವರು. ಕೆಲವು ಕಡೆ ದಿನ ನೋಡಿ ನಿಶ್ಚಯಿಸುವ ಪದ್ಧತಿಯು ಇದೆ. ಆದರೆ ಈಗ ಹೆಚ್ಚಿನವರು ಒಂದೇ ದಿನ ಅಂದರೆ ಸೆಪ್ಟೆಂಬರ್ 3ಕ್ಕೆ ಆಚರಿಸುತ್ತಾರೆ.

"ಕೈಲ್ ಪೊಳ್ದ್" ಎಂಬ ಶಬ್ದದ ಅರ್ಥ ಆಯುದಗಳ ಪೂಜೆ ಎಂದಾಗುವುದು. ಕೊಡಗಿನವರು ಸಾಧಾರಣವಾಗಿ ಉತ್ತಮ ಬೇಟೆಗಾರರು. ವರ್ಷಪೂರ್ತಿ ಕತ್ತಿ, ಕೋವಿಗಳನ್ನು ಉಪಯೋಗಿಸುವರು. ವಿಪುಲ ಕಾಡಿನಿಂದ ಕೂಡಿದ ಕೊಡಗಿನ ಕಾಡುಗಳಲ್ಲಿರುವ ಪ್ರಾಣಿಗಳ ಬೇಟೆಯಲ್ಲಿ ಆಸಕ್ತರು. ಆದರೂ ಕೊಡಗಿನವರು ವ್ಯವಸಾಯಗಾರರು. ವ್ಯವಸಾಯದಿಂದಲೇ ಅವರ ಜೀವನ. ಜೀವನದ ಇತರ ಎಲ್ಲಾ ಉದ್ಯಮಗಿಂತಲೂ ವ್ಯವಸಾಯಕ್ಕೆ ಆದ್ಯತೆ ಇತ್ತ ಕಾರಣದ ಸಂಕೇತವೇ ಈ "ಕೈಲ್ ಪೊಳ್ದ್" ಹಬ್ಬದ ಆಚರಣೆಯಾಗಿದೆ.

ಕೊಡಗಿನವರು ತಮ್ಮ ವ್ಯವಸಾಯದ ಕಾಲದಲ್ಲಿ ತಮ್ಮ ಲ್ಲಿಯ ಕತ್ತಿ, ಕೋವಿ ಮುಂತಾದ ಆಯುಧಗಳಿಗೆ ವಿಶ್ರಾಂತಿ ಕೊಡುತ್ತಾರೆ. ಕೆಲವು ಕಡೆ ಕೈಲ್ ಪೊಳ್ದ್ ಕಟ್ಟ್ [ನಿಬಂಧನೆ] ಇದೆ. ಇದರ ಪ್ರಕಾರ ತಮ್ಮ ಆಯುಧಗಳನ್ನೆಲ್ಲಾ ತಮ್ಮ ಮನೆಯ ದೇವರ ಕೋಣೆಯಲ್ಲಿ ಇಟ್ಟು ಶಾಸ್ತ್ರೋಕ್ತವಾಗಿ ಕೆಳಗಿಟ್ಟ ಆಯುಧಗಳನ್ನು ಕೈಲ್‌ಪೊಳ್ದ್ ದಿನ ಆಯುಧ ಪೂಜೆ ನಡೆಸಿಯೇ ತೆಗೆಯುವರು. ಈ ಅವಧಿಯಲ್ಲಿ ಯಾವ ತೊಂದರೆ ಬಂದರು ಅಜ್ಞಾತವಾಗಿಟ್ಟ ಆಯುಧ ತೆಗೆದು ಬಳಸುವಂತಿಲ್ಲ. ಈ ಅವಧಿಯಲ್ಲಿ ಬೇಟೆ ನಿಷಿದ್ಧ. ಈ ಸಮಯದಲ್ಲಿ ರೈತರು ವ್ಯವಸಾಯದಲ್ಲಿ ನಿರತರಾಗಿರುವ ಕಾರಣ ಸೋಣ್ತಂಗಳ 18 ರೊಳಗೆ ನಾಟಿ ಕೆಲಸ ಮುಗಿಯಲೇಬೇಕೆಂಬ ಕಟ್ಟು ಸಹ ಕೊಡಗಿನಲ್ಲಿದೆ. ವ್ಯವಸಾಯ ಮುಗಿದ ನಂತರ ತಮ್ಮ ಆಯುಧ ವನ್ನು ತೆಗೆದು ಶುಚಿಗೊಳಿಸಿ ಶೃಂಗರಿಸಿ ಪೂಜಿಸುವರು. ಸಾಮಾನ್ಯವಾಗಿ ಕೊಡಗಿನವರು ಅಂದು ದೇಶದ ಎಲ್ಲೆ ಇರಲಿ ತಾಯ್ನಾಡಿಗೆ ಮರಳಿ ಬಂದು ಈ ಹಬ್ಬವನ್ನು ಆಚರಿಸುತ್ತಾರೆ. ಊರಿನವರು ನೆಂಟರಿಷ್ಟರೊಡಗೂಡಿ ಆಚರಿಸುವ ಈ ಹಬ್ಬವು ಮಹತ್ವದ್ದಾಗಿದೆ. ಹಲವು ಕಡೆ ಆಟೋಟಗಳು, ಮನೋ ರಂಜನೆ ಕಾರ್ಯಕ್ರಮಗಳು, ತೆಂಗಿನಕಾಯಿಗೆ ಗುಂಡು ಹೊಡೆಯುವುದು ಈ ಹಬ್ಬದ ವಿಶೇಷತೆಗಳಲ್ಲೊಂದು. ಹಾಗೆ ಕೈಲ್ ಪೊಳ್ದ್ ಹಬ್ಬವು ಕೊಡಗಿನವರಿಗೆ ಮುಖ್ಯವಾದ ಹಬ್ಬ ಗಳಲ್ಲೊಂದಾಗಿದೆ.

: ಸೂಕ್ತಿ :

ಅನುಭವಿಯಾದ ಲೇಖಕನಿಂದ ಹೊರ ಬಂದ ವಿಚಾರ ಪೂರಿತ ಪುಸ್ತಕವೊಂದು ಸಮಾಜದ ರೀತಿಯನ್ನೇ ಬದಲಿಸ ಬಲ್ಲುದು.

○ ಮಕ್ಕಳಲ್ಲಿ ಆಟವಾಡುವ ಅಭ್ಯಾಸ ಬೆಳೆಯುವಷ್ಟು ಸಹಜ ವಾಗಿ ನಮ್ಮಲ್ಲಿ ಪುಸ್ತಕ ಓದುವ ಅಭ್ಯಾಸ ಬೆಳೆಯಬೇಕು.

● ಒಮ್ಮೆ ಓದಿ ಬಿಡಬಹುದಾದ ಪುಸ್ತಕವನ್ನು ಗ್ರಂಥಾ ಲಯದಿಂದ ಪಡೆದುಕೊಳ್ಳಿ. ಮತ್ತೆ ಮತ್ತೆ ಓದಬೇಕಾದ ಪುಸ್ತಕವನ್ನು ಕೊಂಡಿಟ್ಟುಕೊಳ್ಳಿ.

ಗೃಹಕಾರ್ಯದಿಂದ ರಾಜಕೀಯದೆಡೆಗೆ ಶ್ರೀಮತಿ ಕೋರನ ಗಂಗಮ್ಮ ಪೂಣಚ್ಚ

ಕುಶಾಲನಗರದಿಂದ ಮಡಿಕೇರಿಗೆ ಸಾಗುವ ರಸ್ತೆಯಲ್ಲಿ ಸಿಗುವ ಊರೇ ಗುಡ್ಡೆ ಹೊಸೂರು. ಅಲ್ಲಿ ಕೋರನ ಪೂಣಚ್ಚನವರು ಚಿರಪರಿಚಿತರು. ಅವರ ಮನೆಗೆ ಯಾರೇ ಹೋಗಲಿ ಕಿಟಕಿಯಿಂದೊಮ್ಮೆ ಬಗ್ಗಿ ನೋಡಿ, ಹೊರ ಬಂದು ಕರಜೋಡಿಸಿ ಮನೆಗೆ ಆಹ್ವಾನಿಸಿ, ಉಪಚರಿಸಿ ಬೀಳ್ಕೊಡುವ ಮಹಿಳೆಯೇ ಶ್ರೀಮತಿ ಕೋರನ ಗಂಗಮ್ಮ ಪೂಣಚ್ಚ.

ಕೆದಂಬಾಡಿ ಚಿಣ್ಣಪ್ಪನವರ ಮೊದಲನೇ ಮಗಳಾದ ಇವರು ಮಡಿಕೇರಿಯಲ್ಲಿ ಮತ್ತು ಬೆಂಗಳೂರಿನಲ್ಲೂ ಪಿ. ಯು. ಸಿ. ವಿದ್ಯಾಭ್ಯಾಸ ಮುಗಿಸಿದ ನಂತರ, ಸುಂಟಿಕೊಪ್ಪದ ಅತ್ತೂರು ನಲ್ಲೂರು ಗ್ರಾಮದ ಕೋರನ ಪೂಣಚ್ಚ ರವರನ್ನು ವಿವಾಹವಾದರು. ಅಲ್ಲಿಯವರೆಗೂ ರಾಜಕೀಯದ ಗಂಧ ಗಾಳಿಯೇ ಇರದಿದ್ದ ಗಂಗಮ್ಮನವರ ಬದುಕು ಪೂಣಚ್ಚನವರ ಕೈಹಿಡಿದ ಮೇಲೆ ಸಂಪೂರ್ಣ ಬದಲಾಗತೊಡಗಿದರು. ಪತಿಯ ಪ್ರಭಾವದಿಂದ ರಾಜಕೀಯ ರಣರಂಗಕ್ಕೆ ಧುಮುಕಿದ ಇವರು ಜಯಭೇರಿ ಬಾರಿಸಿ ಇಂದು ಸೋಮವಾರಪೇಟೆ ತಾಲ್ಲೂಕು ಪಂಚಾಯಿತಿ ಸದಸ್ಯೆಯಾಗಿ ಅವಿರತ ಜನ ಸೇವೆಯಲ್ಲಿ ತೊಡಗಿದ್ದಾರೆ.

ಸುಮಾರು 10 ವರ್ಷಗಳ ಕಾಲ ಮಹಿಳಾ ಸಮಾಜದ ಅಧ್ಯಕ್ಷೆಯಾಗಿ ಮಹಿಳೆಯರ ಏಳಿಗೆಗಾಗಿ ಜೀವನ ಸವೆಸಿದ್ದ ಇವರು, ಇಂದು ಪ್ರಬುದ್ಧ ರಾಜಕಾರಣಿಯಾಗಿ ಮಾತನಾಡುತ್ತಾರೆ. "ನಾನು ಚುನಾವಣೆಯಲ್ಲಿ ಆರಿಸಿ ಬಂದ ಮೇಲೆ ಒಬ್ಬ ಜನಪ್ರತಿನಿಧಿ. ಆದ್ದರಿಂದ ಈಗ ನಾನು ಆ ಪಕ್ಷ ಈ ಪಕ್ಷ ಎನ್ನುವ ಭೇದ ಭಾವ ಬಿಟ್ಟು ಎಲ್ಲರ ಕಲ್ಯಾಣಕ್ಕಾಗಿ ಕಂಕಣಬದ್ಧನಾಗಿದ್ದೇನೆ. ಎಲ್ಲಾ ಸಭೆ ಸಮಾರಂಭಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದೇನೆ. ನನ್ನ ದುಡಿಮೆಯನ್ನು ನೋಡಿ ಜನ ನನಗೆ ಎಲ್ಲಿಯವರೆಗೆ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ನೀಡುವರೋ ಅಲ್ಲಿಯವರೆಗೂ ಜನಸೇವೆ ಮಾಡುತ್ತೇನೆ. ನನಗೆ ಅಧಿಕಾರದ ಮೇಲೆ ಅಭಿಲಾಷೆಯೇನೂ ಇಲ್ಲ. ಆದರೆ ಒದಗಿ ಬಂದ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳಲಾರೆ" ಎನ್ನುತ್ತಾರೆ ಈ ಆದರ್ಶ ರಾಜಕಾರಣಿ.



ಕೋರನ ಪೂಣ್ಣಚ್ಚ ಮತ್ತು ಅವರ ಪತ್ನಿ ಗಂಗಮ್ಮ

ಇಂದಿನ ನಮ್ಮ ದೇಶದ ರಾಜಕಾರಣದ ಬಗ್ಗೆ ಇವರ ಗಮನ ಸೆಳೆದರೆ, ಇವರ ಮುಖದಲ್ಲಿ ದುಃಖದ ಛಾಯೆ ಮೂಡುತ್ತದೆ. ದೇಶದ ರಾಜಕಾರಣದಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ದೇಶದಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ, ಅದನ್ನವಲಂಭಿಸಿ ಇತರ ಸಮಸ್ಯೆಗಳು ಉದ್ಭವಿಸುತ್ತಿವೆ. ಇದರಿಂದಾಗಿ ದೇಶದಲ್ಲಿ ದಂಗೆಗಳು, ದರೋಡೆ, ಕೊಲೆ ಮುಂತಾದ ಅಪರಾಧಗಳು ಹೆಚ್ಚಿ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಇಂದು ರಾಜಕೀಯ ಪಕ್ಷಗಳು ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ. ನಮ್ಮ ದೇಶಕ್ಕೆ ಪ್ರಬಲ ವಿರೋಧ ಪಕ್ಷ ಇದ್ದು, ದ್ವಿಪಕ್ಷ ಪದ್ಧತಿ ಬಂದರೆ ದೇಶದ ರಾಜಕಾರಣ ಶುದ್ಧವಾಗಬಹುದೇನೋ ಎನ್ನುವ ಮನದಾಳದ ಬಯಕೆಯನ್ನು ಈ ದೇಶಪ್ರೇಮಿ ಹೊರಗೆಡಹುತ್ತಾರೆ.

ನಮ್ಮ ಗೌಡ ಜನಾಂಗದ ಬಗ್ಗೆ ಇವರೊಡನೆ ಮಾತಿಗಿಳಿದರೆ, ನಮ್ಮ ಜನಾಂಗಕ್ಕಾಗಿ ಇವರ ಹೃದಯದ ಅನುಕಂಪ ಮೊಳಗುತ್ತದೆ. ನಮ್ಮ ಜನರಲ್ಲಿ ಹಿಂಜರಿಕೆ, ನಾಚಿಕೆ ಮನೆಮಾಡಿಕೊಂಡಿದೆ. ಅದನ್ನು ಬಿಟ್ಟರೆ ನಾವು ಮುಂದುವರಿಯುವುದರಲ್ಲಿ ಸಂಶಯವೇ ಇಲ್ಲ. ಎದುರೆದುರು ಮಾತನಾಡದೆ, ಹಿಂದಿನಿಂದ ಹೀಯ್ಯಾಳಿಸುವ ಮಂದಿಯೇ ಜಾಸ್ತಿಯಾಗಿರುವುದು ನಮ್ಮ ಜನಾಂಗಕ್ಕೆ ಒದಗಿಬಂದ ಶಾಪ ಎನ್ನುತ್ತಾರೆ ಇವರು. ಈ ವಿಚಾರದಲ್ಲಿ ಮಹಿಳೆಯರೂ, ಮಹನೀಯರೂ ಎಚ್ಚೆತ್ತುಕೊಳ್ಳುವುದು ಅವಶ್ಯಕ ಎನ್ನುವುದು

ಇವರ ಸಲಹೆಯಾಗಿದೆ. "ನಮ್ಮಲ್ಲಿ ಇಂದು ಹಲವಾರು ಸಂಘ ಸಂಸ್ಥೆಗಳಿದ್ದರೂ, ಅವುಗಳ ನಡುವೆ ಹೊಂದಾಣಿಕೆ, ಸಂಪರ್ಕ ಇಲ್ಲ. ಪರಸ್ಪರ ಸಂಪರ್ಕವಿಟ್ಟುಕೊಂಡು, ನಮ್ಮ ಸಂಸ್ಕೃತಿಯ ಬೆಳವಣಿಗೆ ಬಗ್ಗೆ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯಗತ ಮಾಡಿ" ಎಂದು ಇವರು ನಮ್ಮ ಗೌಡ ಸಂಸ್ಥೆಗಳಿಗೆ ಕರೆ ನೀಡುತ್ತಾರೆ.

ಗಂಗಮ್ಮನವರ ಜೀವನದಲ್ಲಿ ಅವರ ಪತಿಯ ಪಾತ್ರ ಅಮೋಘವಾದುದು. ಕೋರನ ಪೂಣಚ್ಚನವರು ಒಬ್ಬ ಜನಾನುರಾಗಿಯಾಗಿ ದುಡಿಯುತ್ತಿರುವವರು. ಸುಂಟಿಕೊಪ್ಪ ಸಹಕಾರ ಸಂಘದಲ್ಲಿ ಜನಹಿತಕ್ಕಾಗಿ ದುಡಿದಿರುವ ಇವರು ಇಂದು ಮಡಿಕೇರಿ ಹಾಗೂ ಕುಶಾಲನಗರ ಎರಡೂ ಗೌಡ ಸಮಾಜಗಳ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವುದು ಇವರ ಜನಪರ ಕಾರ್ಯಕ್ಕೆ ಕೈಗನ್ನಡಿ ಹಿಡಿದಂತೆ, ಗೌಡ ಸಮಾಜಗಳ ಕಾರ್ಯದ ಬಗ್ಗೆ ಇವರಿಗೆ ತೃಪ್ತಿ ಇಲ್ಲ. ಜನಾಂಗವನ್ನು ಮೇಲೆತ್ತುವ ಬಗ್ಗೆ ಅಪಾರ ಆಕಾಂಕ್ಷೆ ಹೊಂದಿರುವ ಇವರು ತಪ್ಪುಗಳನ್ನು ಕ್ಷಣದಲ್ಲೇ ಖಂಡಿಸುವ ನೇರ ನುಡಿಯ ವ್ಯಕ್ತಿ. ನಮ್ಮಲ್ಲಿ ಅಪಾರ ಶಕ್ತಿಯಿದೆ, ಆದರೆ ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಆಗುತ್ತಿಲ್ಲ. ನಮ್ಮಲ್ಲಿ ಹಲವು ಪ್ರತಿಭೆಗಳು ಕಮರಿ ಹೋಗುವ ಸ್ಥಿತಿಯಲ್ಲಿವೆ. ಅವುಗಳನ್ನು ಅರಳಿಸಬೇಕು. ಈ ಕಾರ್ಯದಲ್ಲಿ ನಮ್ಮ ಗೌಡ ಸಮಾಜಗಳು ಜನರನ್ನು ಅಣಿಗೊಳಿಸಬೇಕು ಎನ್ನುತ್ತಾರೆ ಪೂಣಚ್ಚನವರು.

ಶ್ರೀಮತಿ ಕೋರನ ಗಂಗಮ್ಮ ಪೂಣಚ್ಚನವರದು ಆದರ್ಶ ದಾಂಪತ್ಯ. ಇಬ್ಬರೂ ಪರಸ್ಪರ ಹೊಂದಿಕೊಂಡು ಹೋಗುತ್ತಾರೆ. ಒಬ್ಬರ ತಪ್ಪನ್ನು ಇನ್ನೊಬ್ಬರು ತಿದ್ದಿಕೊಳ್ಳುತ್ತಾರೆ. ಇವರ ಒಬ್ಬನೇ ಮಗನನ್ನು ಪದವೀಧರನನ್ನಾಗಿ ಮಾಡಿ ವಿವಾಹ ಮಾಡಿ ತಮ್ಮ ತೋಟ ನಿರ್ವಹಣೆಯ ಜವಾಬ್ದಾರಿ ವಹಿಸಿಕೊಟ್ಟಿದ್ದಾರೆ. ಇವರಲ್ಲಿ ಶ್ರೀಮಂತಿಕೆಗೇನೂ ಕೊರತೆಯಿಲ್ಲ, ಅದೇ ಮಟ್ಟದಲ್ಲಿ ಹೃದಯ ಶ್ರೀಮಂತಿಕೆಯನ್ನು ಇವರು ಬೆಳೆಸಿಕೊಂಡಿದ್ದಾರೆ. ಸ್ವತಃ ಪತಿ ಪತ್ನಿಯರಿಬ್ಬರಿಗೂ ಕೃಷಿ ಕಾರ್ಯದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಳ್ಳುತ್ತಿದ್ದಾರೆಂದು, ಬೆಳೆದು ನಿಂತ ಕಲ್ಪವೃಕ್ಷಗಳು ಜೀವಂತ ಸಾಕ್ಷಿ ನುಡಿಯುತ್ತವೆ. ಸಂಗಾತಿಯನ್ನು ಮಾತನಾಡಿಸಿ ಆತ್ಮೀಯವಾಗಿ ಬೀಳ್ಕೊಟ್ಟ ಆದರ್ಶ ದಂಪತಿಗಳಿಗೆ ಸಂಗಾತಿಯ ವಂದನೆಗಳು.

—ನಮ್ಮ ವರದಿಗಾರರಿಂದ

ಜೀವನದಲ್ಲಿ ಮನುಷ್ಯನಾಟ

10 ವರ್ಷದಲ್ಲಿ ಹಿತ್ತಲಲ್ಲಿ ಆಟ
20 ವರ್ಷದಲ್ಲಿ ಸುಂದರಿ ಆಟ
30 ವರ್ಷದಲ್ಲಿ ಮನೆ ತುಂಬಾ ಮಕ್ಕಳಾಟ
40 ವರ್ಷದಲ್ಲಿ ಕಣ್ಣಿಗೆ ಕನ್ನಡಕ
50 ವರ್ಷದಲ್ಲಿ ಕೈಕಾಲು ನಡುಕ
60 ವರ್ಷದಲ್ಲಿ ಅಲ್ಲೋ ಮಲ್ಲೋ
70 ವರ್ಷದಲ್ಲಿ ಮುಪ್ಪಿನಾಟ
80 ವರ್ಷದಲ್ಲಿ ಚೊಪ್ಪು ಉದುರಿನಾಟ
90 ವರ್ಷದಲ್ಲಿ ತೊಂಡನಾಟ
100 ವರ್ಷದಲ್ಲಿ ಸ್ವರ್ಗದಲ್ಲಾಟ.

● **ಹುದೇರಿ ಟೀನಾ ಸೋಮಣ್ಣ**

ನುಡಿ ಮುತ್ತು

ಕಲಿಸುವ ಗುರುವಿಗೆ ಕುರ್ಚಿ ಬೇಕು
ಕಲಿಯುವ ಶಿಷ್ಯನಿಗೆ ಬೆಂಚು ಬೇಕು
ಕುರ್ಚಿ ಬೆಂಚಿನ ಅಂತರ ಬೇರೆ ಬೇರೆ
ಆದರೆ ಬಳಸುವ ಮರ ಒಂದೆ.

–ಕುವೆಂಪು

○ ಸಂಗ್ರಹ : **ಬಿ. ಸಿದ್ದರಾಜು,** ಮಡಿಕೇರಿ

ನಮ್ಮ ಸಂಸ್ಕೃತಿ

ಬೇಡ ಬೇಡ ಬೇರೆ ಪುಸ್ತಕಗಳ ಸಹವಾಸ
ಕೊಡಗು ಸಂಗಾತಿಯಲ್ಲಿಡಿ ನಮ್ಮ ವಿಶ್ವಾಸ
ತಿಳಿಯಿರಿ ಗೌಡ ಜನಾಂಗದ ಇತಿಹಾಸ
ಸುಮ್ಮನೆ ಮಾಡಬೇಡಿ ಇತಿಹಾಸದ ನಿರ್ಗತಿ
ನಾವೆಲ್ಲ ಉಳಿಸುವ ಗೌಡ ಸಂಸ್ಕೃತಿ.

● **ಮುಕ್ಕಾಟಿ ಕುಸುಮಾಕರ ಕಿರಣ್**
ಚೇರಂಬಾಣೆ

ನಕ್ಕುಬಿಡಿ

ಅಪ್ಪ ಯಾರೋ ಮಾಡಿದಕ್ಕೆ ಯಾರಿಗೊ ಶಿಕ್ಷೆ. ಇದು ನ್ಯಾಯನಾ ?
ಅಂಥದು ಏನಾಯ್ತು ಮರಿ
ಅಪ್ಪ, ನೀನು ನನ್ನ ಹೋಂ ವರ್ಕ್ ಮಾಡಿಕೊಟ್ಟಿದರಿಂದ ನನಗೆ ಏಟು
ಇದು ನ್ಯಾಯನಾ.

ಬಿ. ಸಿ. ಗುರುಪ್ರಸಾದ್, ಮಡೆ.

ಕುಲಚಾತ (ಪಂಜಿ ಎರವರು)

ಒಂದು ಕಾಡಿನಲ್ಲಿ ಇಬ್ಬರು ಮಾಟಗಾತಿಯರಿರುತ್ತಾರೆ. ಅವರ ಮಗಳಂದಿರು ಕಾರಿಮಚಣೆ–ಬೊಳಿಯಮಚಣೆ. ತಮಗೆ ಮಕ್ಕಳು ಬೇಕೆಂದು ಇವರು ಪೀಡಿಸಿದಾಗ ಮಾಟಗಾತಿಯರು ಎರಡು ಗಂಡು ಮಕ್ಕಳನ್ನು ಅವರ ಹೆತ್ತ ತಾಯಂದಿರಿಂದ ಕದ್ದು ತರುತ್ತಾರೆ. ಅವರಿಗೆ ಆರ್ಯ ಮತ್ತು ಬಾಣೆ ಎಂದು ಹೆಸರಿಡುತ್ತಾರೆ. ಅವರಿಗೆ ಹಾಲುಕುಡಿಸಲು ದನ ತರುವುದಕ್ಕೆ ಒಬ್ಬ ಶೆಟ್ಟಿಯಲ್ಲಿ ಮನೆಕೆಲಸಕ್ಕೆ ಹೋಗುತ್ತಾರೆ. ಆತನಿಂದ ಪಡೆದು ತಂದ ಹಸು ಕಾಡಿನಲ್ಲಿ ತಪ್ಪಿಸಿಕೊಂಡು ಓಡಿಹೋಗುತ್ತದೆ.

ಆರ್ಯ ಬಾಣೆ ಬೆಳೆದು ದೊಡ್ಡವರಾಗಿ ಮಣ್ಣಿನ ಗಂಡು ಹೆಣ್ಣು ಗೊಂಬೆಗಳನ್ನು ಮಾಡಿ ಅವುಗಳಿಗೆ ಜೀವ ಕೊಡುವುದಾಗಿ ತೀರ್ಮಾನಿಸುತ್ತಾರೆ. ಅದಕ್ಕೆ ಬೇಕಾಗುವ ಮಣ್ಣನ್ನು ಹುಡುಕುತ್ತಾ ಹೋಗುತ್ತಾರೆ. ದಾರಿಯಲ್ಲಿ ಕತ್ತಲಾದಾಗ ಕಡಲು ಸೂಳೆ ಚೀತೆ ಎಂಬುವಳ ಮನೆಯಲ್ಲಿ ತಂಗುತ್ತಾರೆ. ಆಕೆಯ ಮೋಹಕ್ಕೆ ಒಳಗಾಗಿ ಇಬ್ಬರೂ ಆಕೆಯ ಸಂಗ ಮಾಡುತ್ತಾರೆ: ಬೆಳಗಾದಾಗ ಆಕೆ ಅಸ್ಪೃಶ್ಯಜಾತಿಗೆ ಸೇರಿದವಳು ಎಂಬುದು ಗೊತ್ತಾಗುತ್ತದೆ. ಅವಳು ಮೋಸಗಾತಿ ಎಂದು ನಿಂದಿಸುತ್ತಾರೆ. "ನನ್ನನ್ನು ಕೀಳು ಜಾತಿಯವಳೆನ್ನಬೇಡಿ, ಗಂಡು–ಹೆಣ್ಣು ಎರಡೇ ಜಾತಿ. ಸೂಳೆಗೂ ಸುಣ್ಣಕ್ಕೂ ಮೈಲಿಗೆ ಇಲ್ಲ. ಏನೂ ತಪ್ಪು ನಡೆದಿಲ್ಲ" ಎಂದು ವಾದಿಸುತ್ತಾಳೆ. ಆಗ ಸಿಟ್ಟುಗೊಂಡು ಅವಳಿಗೆ ಶಾಪ ಕೊಡುತ್ತಾರೆ. ಅಲ್ಲಿಂದ ಹೊರಟ ಅವರ ದಾರಿಗೆ ಅಡ್ಡವಾಗಿ ಆಕೆಯ ತಂದೆ ಗಾಳ ಹಾಕುತ್ತಾ ಕುಳಿತಿರುತ್ತಾನೆ. ಏಳಲು ಹೇಳಿದಾಗ "ರಾತ್ರಿ ನನ್ನ ಮಗಳನ್ನು ಮುಟ್ಟಿದ್ದೀರಿ, ಈಗ ಅಪ್ಪನನ್ನು ಮುಟ್ಟೋದು ತಪ್ಪೆ ?" ಎಂದು ಪ್ರಶ್ನಿಸುತ್ತಾನೆ. ಆತ ಮಂತ್ರವಾದಿಯಾಗುವಂತೆ ಹರಸುತ್ತಾರೆ.

ಅವರಿಗೆ ಬೇಕಾದ ಮಣ್ಣು ಒಬ್ಬ ಕುಂಬಾರನಲ್ಲಿರುತ್ತದೆ. ಆತ ಊಟ ಮಾಡಲು ಹೋಗುವಾಗ ಮಣ್ಣನ್ನು ಕಾಯುತ್ತಿರಲು ಸೋದರಿಗೆ ಹೇಳುತ್ತಾನೆ. ಅವರು ಅದರಿಂದ ಸ್ವಲ್ಪ ಮಣ್ಣು ಕದಿಯುತ್ತಾರೆ. ಕುಂಬಾರನಿಗೆ ಮಣ್ಣು ಕಡಿಮೆಯಾದದ್ದು ಗೊತ್ತಾಗುತ್ತದೆ, ಆತನನ್ನು ಸ್ವಚ್ಛ ನೀರಿಗೆ ಇಳಿಸಿದಾಗ ನೀರು ಕೆಂಪಗಾಗುತ್ತದೆ. ಮಣ್ಣು ನಿನ್ನ ಕಾಲಿನಲ್ಲೇ ಇತ್ತು ಎಂದು ಆತನನ್ನು ನಂಬಿಸುತ್ತಾರೆ. ಹೀಗೆ ತಂದ ಮಣ್ಣಿನಿಂದ ಗೊಂಬೆ ಮಾಡಿ ಜೀವ ಪಡೆದವರೇ ಎರವ ದಂಪತಿಗಳು. ಗಂಡಸು ಚಾತ. ಆರ್ಯ ಬಾಣೆ ಈ ಪವಾಡದಿಂದ ರಾಜರಾಗುತ್ತಾರೆ. ವಿದ್ಯೆಯ ಮರನೆಟ್ಟು ಬೆಳೆಸುತ್ತಾರೆ. ಅದರ ಎಲೆಗಳಲ್ಲಿ ವಿದ್ಯೆ ಇತ್ತು. ಅವುಗಳನ್ನು ಮೇಲ್ಜಾತಿಯವರಿಗೆ ಹಂಚುತ್ತಾರೆ. ಎರವ ಚಾತನಿಗೆ ಕೊಡಲು ಎಲೆಗಳೇ ಉಳಿದಿರುವುದಿಲ್ಲ. ಉದುರಿದ್ದ ತರಗೆಲೆಗಳನ್ನು ಸುಟ್ಟು ಬೂದಿ ಮಾಡಿ ಅವರ ಮೈಗೆ ಹಚ್ಚುತ್ತಾರೆ. ನೀರು ಬೆರಸಿ ಕುಡಿಸುತ್ತಾರೆ,

ಕೆಲವು ಕಾಲದ ನಂತರ ಮೇಲ್ಜಾತಿಯವರನ್ನು ವಿಚಾರಿಸಿದಾಗ ರಾಜರಿಗೆ ನಿರಾಶೆಯಾಗುತ್ತದೆ. ಕೆಲವರು ವಿದ್ಯೆಯ ಎಲೆಗಳನ್ನು ಭದ್ರವಾಗಿ ಪೆಟ್ಟಿಗೆಯಲ್ಲಿಟ್ಟರು. ಕೆಲವರು ಪೂಜೆಮನೆಯಲ್ಲಿಟ್ಟಿರುತ್ತಾರೆ. ಮತ್ತೆ ಕೆಲವರು ಬಹುಮಾನ ಎಂಬಂತೆ ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ಚಾತನಿಗೆ ವಿದ್ಯೆ ರಕ್ತಗತವಾಗಿ ಮೈಗೂಡಿರುತ್ತದೆ.

ಇದೇ ರೀತಿ ರಾಜರು ಭೂಮಿಯನ್ನು ಹಂಚುವಾಗ ದುಡಿದು ದಣಿದ ಎರವಚಾತ ನಿದ್ದೆ ಹೋಗಿರುತ್ತಾನೆ. ಆತ ರಾಜನಲ್ಲಿ ತಲುಪಿದಾಗ ಎಲ್ಲಾ ಭೂಮಿ ಮೇಲ್ಜಾತಿಯವರಿಗೆ ಹಂಚಿ ಆಗಿರುತ್ತದೆ. ತನಗೆ ಆದ ಅನ್ಯಾಯವನ್ನು ಚಾತ ಪ್ರತಿಭಟಿಸುತ್ತಾನೆ. ಈತನಿಗೆ ಬೈಗಳು, ಒದೆತ, ಹೊಡೆತಗಳ ಹೊರತು ಬೇರೇನು ಸಿಗುವುದಿಲ್ಲ. ಸಿಟ್ಟುಗೊಂಡ ಚಾತ ಸೂರ್ಯ, ಚಂದ್ರರ ಕಣ್ಣುಗಳಿಗೆ ಬಾಣ ಬಿಟ್ಟು ಕಾಲದ ಚಲನೆಯನ್ನೇ ನಿಲ್ಲಿಸುತ್ತಾನೆ. ಆಗ ರಾಜರು, ಪ್ರಜೆಗಳು ಆತನಿಗೆ ಶರಣಾಗುತ್ತಾರೆ. ಯಾರಿಗೂ ಕೊಡದೆ ಬಾಕಿಯಾಗಿ ಉಳಿದಿರುವ ಎಲ್ಲಾ ಕಾಡನ್ನು ಆತನಿಗೆ ಕೊಡುತ್ತಾರೆ. ಅಂದಿನಿಂದ ಕಾಡು ಎರವರದ್ದಾಗುತ್ತದೆ. ಸೂರ್ಯ ಚಂದ್ರರ ಮೇಲಿನ ನಿಯಂತ್ರಣವನ್ನು ಬಿಟ್ಟುಕೊಡುತ್ತಾನೆ. ಆತನನ್ನು ಕಾಲಚಾತ ಮಹಾಮಹಿಮನೆಂದು ಜನರು ಕೊಂಡಾಡುತ್ತಾರೆ.

● ಎನ್. ಎಸ್. ದೇವಿಪ್ರಸಾದ್

ಕೊಡಗು

ಕೊಡಗಿದು ದಕ್ಷಿಣಕಾಶ್ಮೀರ
ತುಂಬಿದೆ ಎಲ್ಲೆಡೆ ಹಸಿರಿನ ಪರಿಸರ
ಕಾಫಿ ಯಾಲಕ್ಕಿಯಿಂದಾಗಿದೆ ಸಿಂಗಾರ
ಕಾವೇರಿಯು ಜನಿಸಿದ ಈ ಮಂದಿರ,

● ಕೊಂಪುಳಿರ ಬೇಬಿ ಮುತ್ತಪ್ಪ
ಬೆಂಗಳೂರು.

ನನಗೆ ಬೇಕು

ಮನೆಗೆ ಬೇಕು ಮಗು
ಮನಕ್ಕೆ ಬೇಕು ನಗು
ನನಗೆ ಬೇಕು ಸಂಗಾತಿ.

●ಕಣ್ಣೇರ ನವಿತ ದಯಾನಂದ,
ಬೆಂಗಳೂರು.

ಬಾಂಗ್ಲಾದ ದಿಟ್ಟ ಮಹಿಳೆ—ತಸ್ಲೀಮಾ

"ಸಂಪ್ರದಾಯ ಮತ್ತು ಮಹಿಳಾ ವಿಮೋಚನೆ ಎರಡೂ ಒಟ್ಟೊಟ್ಟಿಗೆ ಹೋಗುವುದಿಲ್ಲ. ಸಂಪ್ರದಾಯ ವಾದಿಗಳಿಗೆ ಮಹಿಳೆಯರು ಅನಕ್ಷರಸ್ಥರಾಗಿಯೇ ಉಳಿಯಬೇಕು. ಆಕೆ ಬುರ್ಖಾದಲ್ಲಿಯೇ ಓಡಾಡಬೇಕು. ಏಕೆಂದರೆ ವಿಮೋಚಿತಾ ಮಹಿಳೆ ಅವರ ವಿರುದ್ಧ ಧನಿ ಎತ್ತುತ್ತಾಳೆ" ಎನ್ನುತ್ತಾ ಬಾಂಗ್ಲಾದೇಶದ ಮುಲ್ಲಾಗಳ ವಿರುದ್ಧ ಕಿಡಿಕಾರುವ ದಿಟ್ಟ ಮಹಿಳೆ

ರೋಹಿತ್ ಕುದುಕುಳಿ, ಕರಿಕೆ

ತಸ್ಲಿಮಾ ನಸ್ರೀನ್. ಬಾಂಗ್ಲಾದೇಶದ ತಡೆರಹಿತ ಮುಷ್ಕರ, ಚಂಡಮಾರುತಗಳ ನಡುವೆಯೂ ನೊಂದ ಮುಸ್ಲಿಂ ಮಹಿಳೆಯ ನೋವಲ್ಲಿ ಭಾಗಿಯಾಗುವ ಏಕೈಕ ಮಹಿಳೆಯೆಂದರೆ ಅದು ತಸ್ಲೀಮಾ ಮಾತ್ರ. ಈಕೆ ಬಾಂಗ್ಲಾದೇಶದ ಸಲ್ಮಾನ್‌ರಶ್ದಿ ಎಂದೇ ಕರೆಯಿಸಿಕೊಳ್ಳುವ ಬಂಡಾಯ ಮಹಿಳಾ ಸಾಹಿತಿ. ಈಕೆಯು "ಲಜ್ಜಾ" ಕೃತಿಯಿಂದ ಬಾಂಗ್ಲಾದ ಅಂಧ ಸಂಪ್ರದಾಯದ ವಿರುದ್ಧ ದನಿ ಎತ್ತಿದವಳು.

1961ನೇ ಇಸವಿಯಲ್ಲಿ ಜನಿಸಿದ ಈಕೆ ವೃತ್ತಿಯಿಂದ ವೈದ್ಯೆ, ಪ್ರವೃತ್ತಿಯಿಂದ ಸಾಹಿತಿ. ಈಕೆಯದು ಬಂಡಾಯ ಸಾಹಿತ್ಯ ಅದೂ ಮೂಲಭೂತವಾದಿಗಳ ವಿರುದ್ಧ. ಪರಿಣಾಮ ಆಕೆಯ ದೇಶದಲ್ಲೇ ಆಕೆಗೆ ಜೀವ ಭಯ, ಅಭದ್ರತೆ. ಒಂದೆಡೆ ಧರ್ಮಾಭಿಮಾನಿಗಳ ವಿರೋಧ, ಮತ್ತೊಂದೆಡೆ ಧರ್ಮಾಂಧರ ಕೊಲೆ ಬೆದರಿಕೆ. ಇವೆಲ್ಲದರ ನಡುವೆಯೂ ಅಂಜುತ್ತಲೇ ಬದುಕಬೇಕಾದ ಸ್ಥಿತಿ. ಇಷ್ಟಕ್ಕೆಲ್ಲ ಕಾರಣ ಆ 'ಲಜ್ಜಾ'ದಲ್ಲಿ ಕುರಾನ್‌ನನ್ನು ಅವಹೇಳನ ಮಾಡಿದರೆಂಬುದು. ಇವೆಲ್ಲದರ ಪರಿಣಾಮ ಕೆಲದಿನಗಳ ದೇಶಾಂತರ ಸ್ವಲ್ಪ ದಿನಗಳ ಕಾಲ ಅಲ್ಲೇ ವಾಸ, ಮತ್ತೆ ತಾಯ್ನಾಡಿಗೆ ಇವರದು ಸರಳ ತಾರ್ಕಣೆ, ಕೇವಲ ಮೇಲ್ನೋಟದ ಬರವಣಿಗೆ ಎಂದೆಲ್ಲಾ ಬಣ್ಣಿಸುವವರಿದ್ದಾರೆ. ಆದರೆ ಇದಾವುದೂ ಅಲ್ಲಿನ ಮುಲ್ಲಾಗಳಿಗೆ ಬೇಕಾಗಿಲ್ಲ. ಮರಣ ಶಿಕ್ಷೆಗೆ (ಗಲ್ಲು ಶಿಕ್ಷೆ) ಗುರಿಯಾಗಬೇಕೆಂಬುದೇ ಅವರ ಇಚ್ಛೆ. ಇಂಥಹವರ ನಡುವೆಯೂ ಆಕೆಯ ಧೈರ್ಯವನ್ನು ಮೆಚ್ಚುವವರಿದ್ದಾರೆ, ಏಕೆಂದರೆ ಸಮಾಜದಲ್ಲಿ ಮುಸ್ಲಿಂ ಮಹಿಳೆಯರ ಸ್ಥಾನಮಾನ, ಕೆಟ್ಟ ಸಂಪ್ರದಾಯವನ್ನು ಬಹಿರಂಗವಾಗಿ ವಿರೋಧಿಸಿರುವ ಏಕಮಾತ್ರ ಮಹಿಳೆ. ಸ್ತ್ರೀ ಸ್ವಾತಂತ್ರ್ಯವೇ ಇವರ ಮುಖ್ಯ ಗುರಿ. ತಾನು ಸ್ವತಃ ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬಂದರೂ ಗಮನವೆಲ್ಲಾ ಬಡ ಹೆಣ್ಣು ಮಕ್ಕಳ ಕಡೆಗೇ.

"ಧರ್ಮದ ಅವಶ್ಯಕತೆ ಈಗ ನಮಗಿಲ್ಲ ಅದು ಯಾವ ಕಾಲಕ್ಕೂ ಸೇರದು, ಯಾವ ಸ್ಥಳಕ್ಕೂ ಸೇರದು. ಕುರಾನ್ ಗ್ರಂಥವನ್ನು ಒಂದು ಐತಿಹಾಸಿಕ ಪುಸ್ತಕವಾಗಿ ಪರಿಗಣಿಸಬಹುದು ಅಷ್ಟೆ. ಎಂದು ಈಕೆ ಆಸ್ಟ್ರೇಲಿಯಾ ದೂರದರ್ಶನಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದರು.

ಆದರೆ ಈ ರೀತಿ ಒಂದು ಪವಿತ್ರ ಗ್ರಂಥವನ್ನು ಟೀಕಿಸಿದ್ದನ್ನು ಮೆಚ್ಚದ ಸರಕಾರ ಆಕೆಯ ರಹದಾರಿಯನ್ನು ವಶಪಡಿಸಿಕೊಂಡಿತ್ತು. ನಂತರ ವಾಪಸು ಕೊಟ್ಟಿತೆನ್ನಿ. ಜೀವಭಯದಿಂದ ಪ್ಯಾರಿಸ್ಸಿನಲ್ಲಿ ಸ್ವಲ್ಪ ದಿನ ಕಾಲದೂಡಿದ್ದರು. ಒಮ್ಮೆ ಕಲ್ಕತ್ತಾಕ್ಕೂ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಪತ್ರಿಕೆಯೊಂದು ಕುರಾನ್ ನನ್ನು ಪರಿಷ್ಕರಿಸುವ ಆಲೋಚನೆ ತಸ್ಲಿಮರಿಗೆ ಇದೆಯೆಂದು ವರದಿ ಮಾಡಿತ್ತು, ಇದರಿಂದ ಸಹಜವಾಗಿಯೇ ಮುಸ್ಲೀಮರು ಕೆರಳಿದ್ದರು. ಸ್ವದೇಶಕ್ಕೆ ಮರಳಿದ ನಂತರ ಪತ್ರಿಕೆಗೆ ಸುದೀರ್ಘ ವಿವರಣೆಯೊಂದನ್ನು ಕಳುಹಿಸಿ 'ಪತ್ರಿಕೆ ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿದೆ, ಅಲ್ಲದೆ ಆ ರೀತಿ ಮಾಡುವವರು ಧರ್ಮ ವಿರೋಧಿಗಳು" ಎಂದರು. "ನನ್ನನ್ನು ಸಂದರ್ಶಿಸಿದವರು ಮುಸ್ಲೀಮರಲ್ಲ. ಅವರಿಗೇನು ಗೊತ್ತು ಕುರಾನ್ ಗ್ರಂಥಕ್ಕೂ, ಷರಿಯಾತ್ ಕಾನೂನಿಗೂ ?" ಎಂದು ಅವರನ್ನೇ ಪ್ರಶ್ನಿಸಿದ್ದರು. ಪತ್ರಿಕೆಯ ಈ ತಪ್ಪಿನಿಂದ ನನ್ನ ಮತ್ತು ನನ್ನ ಕುಟುಂಬವು ಜೀವ ಅಪಾಯದಲ್ಲಿದೆ ಎಂದು ರಕ್ಷಣೆ ಕೋರಿ ಅಲ್ಲಿನ ಸಂಸತ್ ಸಭಾಪತಿಗೆ ಪತ್ರ ಬರೆದರು. ಇಷ್ಟೆಲ್ಲಾ ನಡೆದರೂ ತಾವಿರುವ ಅಡಗುದಾಣವನ್ನು ಪ್ರಕಟಿಸುವ ಮತ್ತು ಸಮಸ್ಯೆಗಳನ್ನು ಎದುರಿಸುವ ಧೈರ್ಯ ಮಾತ್ರ ಆಕೆಗಿಲ್ಲ. ಅಲ್ಲಿನ ನ್ಯಾಯಾಲಯದ ಪ್ರಕಾರ ಆಕೆ ನ್ಯಾಯಾಲಯಕ್ಕೆ ಶರಣಾದರೆ ಮಾತ್ರ ಆಕೆಗೆ ರಕ್ಷಣೆಯ ಮಾತು ಎಂದಿದೆ. ಏನೇ ಆದರೂ 'ಲಜ್ಜಾ'ದಿಂದಾಗಿ ಆಕೆಗೆ ವಿಶ್ವವ್ಯಾಪಿ ಪ್ರಚಾರ ಸಿಕ್ಕಿದ್ದಂತೂ ದಿಟ. ●

ನಗೆ ಹೊನಲು

ಮಾಣಿ : ಏನು ಬೇಕು ಸ್ವಾಮಿ ?

ಸೀನ : ಮಸಾಲೆ ದೋಸೆ

ಮಾಣಿ : ಚಹನ, ಕಾಫಿನಾ ?

ಸೀನ : ಚಹ

ಮಾಣಿ : ಬೇರೆ ಏನು ಬೇಕು ಸ್ವಾಮಿ ?

ಸೀನ : ನೂರು ರೂಪಾಯಿ ಹಣ ಕೊಡು ಸಾಕು.

● **ಕೊಂಪಳಿ ಎಸ್. ಸಂದೀಪ್**
ಮಡೆನಾಡು.

ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಯಡಿಕೇರಿ ಉತ್ತಯ್ಯ

ನಾವಿಂದು 50ನೇ ವರ್ಷದ ಸುವರ್ಣ ಸ್ವಾತಂತ್ರ್ಯೋತ್ಸವದ ಹೊಸ್ತಿಲಲ್ಲಿ ಇದ್ದೇವೆ. ದೇಶ ಭ್ರಷ್ಟಾಚಾರ, ಹಗರಣ, ದರೋಡೆ, ಲೂಟಿಗಳಲ್ಲಿ ಸಿಕ್ಕಿ ನಲುಗಿ, ಭಾರತೀಯ ಸಂಸ್ಕೃತಿ ನಶಿಸಿ ಹೋಗುತ್ತಿರುವ ಚಿತ್ರಣವಿಂದು ಕಂಡುಬರುತ್ತಿದೆ. ಎಷ್ಟೋ ಜನ ಬ್ರಿಟೀಷರ ಆಳ್ವಿಕೆಯಿದ್ದಿದ್ದರೇ ಎಷ್ಟೋ ಚೆನ್ನಾಗಿತ್ತು ಎಂದು ಗೊಣಗುವ ಪರಿಸ್ಥಿತಿ ಉಂಟಾಗಿದೆ. ಆದರೆ ಅಂದು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಬ್ರಿಟೀಷರಿಂದ ಭಾರತವನ್ನು ಮುಕ್ತ

ಪಟ್ಟಡ ಶಿವಕುಮಾರ್

ಗೊಳಿಸಿದ, ದೇಶಭಕ್ತರು ಇಂದಿನ ಸ್ಥಿತಿಯನ್ನು ನಿರೀಕ್ಷಿಸಿರಲಿಲ್ಲ. ರಾಮರಾಜ್ಯದ ಕನಸನ್ನು ಹೊತ್ತು ಹೋರಾಡಿದವರು ಅವರು. ಇಂತಹ ಒಬ್ಬ ದೇಶಭಕ್ತ, ಸ್ವಾತಂತ್ರ್ಯ ಹೋರಾಟಗಾರ, ಜ್ಞಾನದ ಮಹಾಪೂರವೇ ಶ್ರೀ ಯಡಿಕೇರಿ ಉತ್ತಯ್ಯನವರು.

1919ರಲ್ಲಿ ಬಲ್ಲಮಾವಟಿಯ ಯಡಿಕೇರಿ ಮೋಟಯ್ಯನವರ ಮಗನಾಗಿ ಜನಿಸಿದ ಇವರು ಅಂದು ಕೇವಲ ನಾಲ್ಕನೇ ತರಗತಿವರೆಗೆ ವಿದ್ಯಾಭ್ಯಾಸ ಪಡೆದರು. ನೆಲಜಿಯ ಪ್ರಾಥಮಿಕ ಶಾಲೆಯಲ್ಲಿ ಓದುವಾಗ ಇವರ ಅಪಾರ ಬುದ್ಧಿವಂತಿಕೆಯನ್ನು ಕಂಡು ಕೆಲವರು ತಾವು ಅವನನ್ನು ಓದಿಸುತ್ತೇವೆಂದು ಮುಂದೆ ಬಂದಿದ್ದರೂ, ತಂದೆ ತಾಯಿಯರಿಗೆ ಮಗನ ಮೇಲಿದ್ದ ಮಮತೆ ಮಗನನ್ನು ಬೀಳ್ಕೊಡಲು ಸಮ್ಮತಿಸದ ಕಾರಣ ನಾಲ್ಕನೇ ತರಗತಿಗೇ ವಿದ್ಯಾಭ್ಯಾಸ ನಿಲ್ಲಿಸಬೇಕಾಯಿತು. ನಂತರ ಮನೆಯಲ್ಲೇ ಗದ್ದೆ ತೋಟಗಳಲ್ಲಿ ಕೆಲಸದಲ್ಲಿ ತೊಡಗಿದರು.

1885ರಲ್ಲಿ ಹುಟ್ಟಿಕೊಂಡಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿ, ಮಂದಗಾಮಿಗಳ ಯುಗ, ತೀವ್ರಗಾಮಿಗಳ ಯುಗಗಳನ್ನು



ಶ್ರೀ ಯಡಿಕೇರಿ ಉತ್ತಯ್ಯ

ಪೂರೈಸಿ, ಗಾಂಧಿಯುಗಕ್ಕೆ ಕಾಲಿರಿಸಿ ಆಗಲೇ 17 ವರ್ಷಗಳು ಸಂದಿದ್ದವು. ಅಂದರೆ 1936ನೇ ಇಸವಿಯಲ್ಲಿ ಉತ್ತಯ್ಯನವರು 17 ವರ್ಷದ ತರುಣ, ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿಯೇ ಬಿಟ್ಟರು. ಸಾರ್ವಜನಿಕರ ಒಲವು ಗಳಿಸುವುದಕ್ಕೋಸ್ಕರ, ಶ್ರೀಮಂತರಿಂದ ಹಣ ಸಂಗ್ರಹಿಸಿ ಬಡವರ ಸೇವೆಗೆ ನಿಂತರು. ಆ ಸೇವೆಯನ್ನು ಮುಂದೆ ಜೀವನ ಪರ್ಯಂತ ರೂಢಿಸಿಕೊಂಡರು. ಬ್ರಿಟೀಷ್ ಸರ್ಕಾರದ ವಿರುದ್ಧ ಹೋರಾಡಲು ಸಾರ್ವಜನಿಕರನ್ನು ಪ್ರೇರೇಪಿಸಿದರು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಇವರನ್ನು ಸರ್ಕಾರವು ಕೆಲವು ದಿನ ಸೆರೆಮನೆಗೆ ತಳ್ಳಿತು. ಸ್ವಾತಂತ್ರ್ಯ ಹೋರಾಟದಲ್ಲಿ ಅಂದು ಭಾಗವಹಿಸಿದ ನಮ್ಮವರೇ ಆದ ಕೋರನ ದೇವಯ್ಯ, ಪೂಜಾರಿ ರಾಮಪ್ಪ ಮೊದಲಾದವರ ಹೋರಾಟವನ್ನು ಇವರು ಸ್ಮರಿಸಿಕೊಳ್ಳುತ್ತಾರೆ. "ಆಗಿನ ಕಾಲದಲ್ಲಿ ಸರ್ಕಾರಿ ಅಧಿಕಾರಿಗಳಾಗಿದ್ದು ಬ್ರಿಟೀಷರ ಉಪ್ಪು ತಿನ್ನುತ್ತಿದ್ದ ಜನ 'ನಿಮಗೆಲ್ಲ ಯಾಕೆ ಬೇಕು. ನಿಮ್ಮ ಕೈಯಿಂದ ಸ್ವಾತಂತ್ರ್ಯ ಪಡೆಯಲು ಹರೆಯದು, ಮನೆಗೆ ಹೋಗಿ ಏನಾದರು ಕೆಲಸ ನೋಡಿ' ಎಂದು ನಮ್ಮನ್ನು ಅಪಹಾಸ್ಯ ಮಾಡುತ್ತಿದ್ದರು. ಆದರೆ 1947ರ ಆಗಸ್ಟ್ 15ರಂದು ವಿಜೃಂಭಣೆಯಿಂದ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದೆವು." ಎಂದು ಈ ಎಪ್ಪತ್ತೆಂಟರ ಸ್ವಾತಂತ್ರ್ಯ ಯೋಧ ಎದೆ ತಟ್ಟಿ ಹೇಳುವಾಗ, ಎದುರಿಗೆ ಕುಳಿತವರೂ ಸ್ವಾತಂತ್ರ್ಯೋತ್ಸವ ಆಚರಣೆಯ ಕಲ್ಪನೆಯಲ್ಲಿ ಮುಳುಗೇಳುತ್ತಾರೆ.

ಸ್ವಾತಂತ್ರ್ಯದ ಬಳಿಕವೂ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತರಾಗಿಯೇ ಇವರು ಮುಂದುವರೆದರು. ಬಲ್ಲಮಾವಟಿ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿ, ಬಲ್ಲತನಾಡು ವಿವಿಧೋದ್ದೇಶ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿ, ಜೊತೆಗೆ ಗ್ರಾಮದ ಪಟೇಲರಾಗಿಯೂ ತಲಾ 30 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಇವರ ಜನ ಸೇವೆಗೆ ಕೈಗನ್ನಡಿಯಾಗಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಗೆದ್ದು ಬಂದರು. ನಂತರ ಇವರ ಪತ್ನಿಯವರೂ ಹಾಗೂ ಇವರ ಮಗಳೂ ಒಂದೊಂದು ಬಾರಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಆರಿಸಿ ಬಂದಿರುವುದು ಇವರ ಮೇಲಿನ ಜನಾಭಿಮಾನವನ್ನು ಸ್ಪಷ್ಟಪಡಿಸುತ್ತದೆ.

ಗೌಡ ಜನಾಂಗಕ್ಕೂ ಇವರ ಸೇವೆ ಸಮರ್ಪಿತವಾಗಿರುವುದನ್ನೂ ಕಾಣಬಹುದು. ಮಡಿಕೇರಿಯ ಗೌಡ ವಿದ್ಯಾ ಸಂಘದಲ್ಲಿ ಮೂರು ವರ್ಷಗಳ ಕಾಲ ನಿರ್ದೇಶಕರಾಗಿ ದುಡಿದ ಇವರು, ಅಲ್ಲಿ ಕೆಲವು ಅವ್ಯವಹಾರಗಳನ್ನು ಕಂಡು ಮನ್ನ

ನೊಂದು, ಅಲ್ಲಿ ಬಡವರಿಗೆ ನೈಜ ಉಪಕಾರ ವಿಲ್ಲವೆಂದು ಅರಿತ ಕೂಡಲೇ ಅಲ್ಲಿಂದ ಹೊರ ನಡೆದವರಂತೆ. ಆದರೂ ಪೇರಿಯನ ಪೂವಯ್ಯ ದಂಬೆಕೋಡಿ ಸುಬ್ರಾಯನಂತಹವರು ಮನಃಪೂರ್ವಕವಾಗಿ ದುಡಿಯುತ್ತಿದ್ದ ರೆಂಬುದನ್ನು ಅವರು ಸ್ಮರಿಸಿಕೊಳ್ಳು ತ್ತಾರೆ. ನಂತರ ಉತ್ತಯ್ಯನವರು ಭಾಗ ಮಂಡಲ ಗೌಡ ಸಮಾಜದ ಸ್ಥಾಪಕ ನಿರ್ದೇಶಕರಲ್ಲಿ ಒಬ್ಬರಾಗಿಯೂ, ಕಟ್ಟಡದ ನಿರ್ಮಾಣದಲ್ಲಿ ತಮ್ಮ ಪಾತ್ರವನ್ನು ನಿರ್ವ ಹಿಸಿ, ಈಗ ವಿಶ್ರಾಂತಿ ಜೀವನ ನಡೆಸು ತ್ತಿದ್ದಾರೆ.

"ನಮ್ಮ ಜನ ಇನ್ನೂ ಮುಂದುವರಿಯ ಬೇಕು, ಬಡವರ ಮೇಲೆ ಪ್ರೇಮವಿಟ್ಟು ನಮ್ಮ ಗೌಡ ಸಂಸ್ಥೆಗಳು ದುಡಿಯಬೇಕು. ಸಂಸ್ಕೃತಿ ರಕ್ಷಣೆಗೆ ಅಗತ್ಯವಾಗಿ ಧಾವಿಸ ಬೇಕು. ಸ್ವಾರ್ಥ ಬಿಟ್ಟು ಜನಾಂಗ ರಕ್ಷಣೆಗೆ ಪಣತೊಟ್ಟು ಕಂಕಣ ಬದ್ಧರಾಗ ಬೇಕು" ಎಂದು ಈ ಜನ ಸೇವಕ ಇಂದಿನ ನಮ್ಮ ಗೌಡ ಸಂಸ್ಥೆಗಳಿಗೆ ಸಲಹೆ ನೀಡು ತ್ತಾರೆ.

ಉತ್ತಯ್ಯನವರು ಬಡವರಾದರೂ, ಕಡಿಮೆ ವಿದ್ಯಾಭ್ಯಾಸವನ್ನು ಪಡೆದಿದ್ದರೂ ಅವರ ವಿದ್ವತ್ತು ಅಸಾಮಾನ್ಯವಾದುದು. ಇಷ್ಟೆಲ್ಲಾ ಅಧಿಕಾರಗಳಿದ್ದರೂ ತಮ್ಮ ಸ್ವಾರ್ಥಕ್ಕಾಗಿ ಏನೂ ಸಾಧಿಸಿಲ್ಲ. ಅಂದು ಹೇಗಿದ್ದರೋ ಇಂದೂ ಹಾಗೆಯೇ ಇದ್ದಾರೆ. ಇನ್ನೊಬ್ಬರೊಡನೆ ವಿರೋಧ ಕಟ್ಟಿ ಕೊಳ್ಳಲು ಇವರು ಬಯಸರು. ಇವರು ದೇಶಭಕ್ತಿಯೊಡನೆ ದೈವಭಕ್ತಿಯನ್ನೂ ಬೆಳೆಸಿಕೊಂಡ ಕಾಲಜ್ಞಾನಿ. ಹಿಂದೆ ಏನೇ ನಾಯಿತು ಎಂಬುದನ್ನು ಕಾಲೋಚಿತವಾಗಿ ಹೇಳುವ ಇವರು ಮುಂದೇನಾಗುತ್ತದೆ ಎಂಬುದನ್ನೂ ಈಗಲೇ ಊಹಿಸಿ ಹೇಳಿ ಬಿಡುತ್ತಾರೆ. ಇಂದಿಗೂ ಎಷ್ಟೋ ಜನ ಯಾವುದೇ ಕಾರ್ಯಕ್ಕೆ ಇವರ ಸಲಹೆ, ಆಶೀರ್ವಾದ ಬೇಡುತ್ತಾರೆ. ಕೊಡಗು ಸಂಗಾತಿಯನ್ನು ಕುರಿತು "ನೀವು ಜನಸೇವೆ, ದೇಶ ಸೇವೆಗೆ ಹೊರಟಿದ್ದೀರಾ, ಆ ದೇವರು ನಿಮಗೆ ಶಕ್ತಿಯನ್ನು ಕರುಣಿಸಲಿ". ಎಂದು ಹರಸಿದ ಆ ಮಹಾನ್ ಸ್ವಾತಂತ್ರ್ಯ ಸೇನಾ ನಿಗೆ ಸಂಗಾತಿಯು 50ನೇ ಸುವರ್ಣ ಸ್ವಾತಂತ್ರ್ಯೋತ್ಸವದ ಶುಭ ಕೋರು ತ್ತದೆ.

ಅಸಮಾನತೆ

ಸಾಮಾನ್ಯವಾಗಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳಿಗೆ ಬುದ್ಧಿ ಶಕ್ತಿ ಚುರು ಕಾಗಿರುತ್ತದೆ ಎಂಬ ನಂಬಿಕೆ ಇದೆ. ಇದು ಸತ್ಯವೇ ? ಇದು ಸತ್ಯವಾದರೆ ಹೆಣ್ಣು ಮಕ್ಕಳು ಏಕೆ ತಮ್ಮ ಈ ಬುದ್ಧಿ ಶಕ್ತಿ ಯನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ? ಎಂಬ ವಿಚಾರಗಳನ್ನು ಕುರಿತು ಆಲೋಚಿಸಿ ದಾಗ ಹಲವಾರು ಕಾರಣಗಳು ನಮಗೆ ಸಿಗುತ್ತವೆ.

ವಾಸ್ತವವಾಗಿ ಮಗು ಹುಟ್ಟಿದಾಗ ಹೆಣ್ಣು ಮತ್ತು ಗಂಡು ಮಕ್ಕಳ ಮೆದುಳಿ ನಲ್ಲಿ ವ್ಯತ್ಯಾಸವೇನು ಇರುವುದಿಲ್ಲ, ಆದರೆ ಮಕ್ಕಳು ಬೆಳೆದಂತೆಲ್ಲಾ ಅವರ ಸುತ್ತಲಿನ ಪರಿಸರ, ಸಾಮಾಜಿಕ ಸಾಂಸ್ಕೃತಿಕ ಪ್ರಭಾವ ಗಳು ಅವರ ಬುದ್ಧಿಶಕ್ತಿಯನ್ನು ನಿಯಂ ತ್ರಿಸುತ್ತವೆ. ಕುಟುಂಬದಲ್ಲಿ ಹೆಚ್ಚು ಪ್ರೋತ್ಸಾಹವಿರುವ ಗಂಡು ಮಗು ಹೆಚ್ಚು ಬುದ್ಧಿವಂತ ಎನಿಸಿಕೊಳ್ಳುತ್ತಾನೆ. ಅಂತಹ ಉತ್ತೇಜನವಿಲ್ಲದ ಹೆಣ್ಣು ಮಗು ಕೆಳಮಟ್ಟ ದವಳು ಎನಿಸಿಕೊಳ್ಳುತ್ತಾಳೆ.

ಬುದ್ಧಿ ಶಕ್ತಿ ಎಂದರೇನು ? ಎಂಬ ಪ್ರಶ್ನೆ ಹಾಕಿಕೊಂಡರೆ ಹಲವು ವಿಷಯಗಳು ಸ್ಪಷ್ಟವಾಗುತ್ತವೆ. ಬುದ್ಧಿ ಶಕ್ತಿ ಎಂದರೆ ಸುತ್ತಲ ಪರಿಸರವನ್ನು ಜ್ಞಾನ, ವಿಜ್ಞಾನ ವನ್ನು ಗ್ರಹಿಸುವುದು. ಅದನ್ನು ವಿಶ್ಲೇ ಷಿಸುವುದು. ಪರಿಸರವನ್ನು ಗ್ರಹಿಸುವ ಮತ್ತು ವಿದ್ಯೆಯ ಅವಕಾಶ ಗಂಡುಮಕ್ಕಳಿಗೆ ಜಾಸ್ತಿ ಏಕೆಂದರೆ ಹೊರಗೆ ನಿರಾತಂಕವಾಗಿ ಸುತ್ತಾಡುವ ಸ್ವಾತಂತ್ರ್ಯವಿರುವುದರಿಂದ ಅವರಿಗೆ ಪ್ರಾಪಂಚಿಕ ಜ್ಞಾನ ಹೆಚ್ಚಾಗಿಯೇ ಇರುತ್ತದೆ. ಪತ್ರಿಕೆ, ವಾರ್ತೆಗಳನ್ನು ಓದುವುದರಲ್ಲಿ ವಿಜ್ಞಾನದ ಮುನ್ನಡೆ ಅರಿಯುವುದರಲ್ಲಿ ಚರ್ಚೆ ಮತ್ತು ವಿಚಾರ ಸಂಕೀರ್ಣಗಳಲ್ಲಿ ಹುಡುಗರು ಹೆಚ್ಚಾಗಿ ಭಾಗವಹಿಸಲು ಅವಕಾಶವಿರುವುದರಿಂದ ಅವರ ತರ್ಕಸಾಮರ್ಥ್ಯ ಉತ್ತಮವಾಗಿರು ತ್ತದೆ. ಮುಂದೆ ಅವನು ಒಂದು ಉದ್ಯೋಗ ಹಿಡಿದು ಕುಟುಂಬವನ್ನು ನೋಡಿಕೊಳ್ಳ ಬೇಕಾಗಿರುವುದರಿಂದ ಅವನ ವಿದ್ಯಾ ಭ್ಯಾಸಕ್ಕೆ ಸಹಜವಾಗಿಯೇ ತಂದೆ ತಾಯಿ ಹೆಚ್ಚು ಪ್ರೋತ್ಸಾಹ ಕೊಡುತ್ತಾರೆ. ಹೀಗೆ ಮನೆಯಲ್ಲಿ ಮಾತ್ರವಲ್ಲದೆ ಹೊರಗಿನ ಸಮಾಜದಲ್ಲೂ ಹುಡುಗನಿಗೆ ಎಲ್ಲಾ ರೀತಿಯ ಅನುಕೂಲತೆಗಳಿರುವುದರಿಂದ ಸಾಧಾರಣ ಹುಡುಗನು ಬುದ್ಧಿವಂತನೆನ್ನಿಸಿಕೊಳ್ಳು ತ್ತಾನೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಈಚಿನ ದಿನಗಳಲ್ಲಿ ಹೆಚ್ಚಾಗಿದೆ ನಿಜ. ಆದರೆ ಅದಕ್ಕೆ ಭದ್ರವಾದ ನೆಲೆಯಿಲ್ಲ. ಕಾರಣ ಹುಡುಗಿಯ ಜ್ಞಾನಾರ್ಜನೆಯ ಹಂಬಲಕ್ಕೆ ಮನೆಯಲ್ಲಿ ಯಾವ ಪ್ರೋತ್ಸಾಹವೂ ದೊರೆಯುವುದಿಲ್ಲ.

ಈ ಹಂಬಲವನ್ನು ಮೊಟಕುಗೊಳಿಸಲು

[10ನೇ ಪುಟ ನೋಡಿ]

ಎಂ. ಬಿ. ರತ್ನಕುಮಾರಿ, ಮಾದಾಪುರ

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 1837ರ ಸ್ವಾತಂತ್ರ್ಯ ಸಂಗ್ರಾಮ

(ಹಿಂದಿನ ಸಂಚಿಕೆಯಿಂದ)

ಇದೇ ರೀತಿ ಎಡೆನಾಡು ಗಡಿನಾಡುಗಳಲ್ಲಿ ಜನವಸತಿ ಕಲ್ಪಿಸುವುದಕ್ಕೆ ಮಂಜ್ರಬಾದು ತಾಲ್ಲೋಕಿನಿಂದ ಲಿಂಗಾಯಿತರನ್ನೂ, ಒಕ್ಕಲಿಗರನ್ನೂ ಮತ್ತು ಇನ್ನಿತರರನ್ನೂ ಕರೆಸಿ ಭೂಮಿಯನ್ನು ಹಂಚಿದರು.

ಈ ರೀತಿಯಾಗಿ ಕೊಡಗಿನ ಜನರ ಸಂಸ್ಕೃತಿಯನ್ನು ಕಾಪಾಡುವುದಕ್ಕೆ ದೊಡ್ಡ ವೀರರಾಜೇಂದ್ರ ಒಡೆಯರು ಕಾರಣಕರ್ತ ರಾಗಿದ್ದಾರೆ. ಬಹುಷಃ ದೊಡ್ಡವೀರ ರಾಜೇಂದ್ರರ ಈ ರೀತಿಯ ಸಾಹಸವಿಲ್ಲ ದ್ದಿದ್ದರೆ ಕೊಡಗಿನ ಇತಿಹಾಸವೇ ಬೇರೆ

ಪೂಜಾರಿ ಪೊಣ್ಣಪ್ಪ, ವಕೀಲರು, ಬೆಂಗಳೂರು

ದಿಕ್ಕಿಗೆ ತಿರುಗುತ್ತಿತ್ತೇನೋ. ಹಾಲೇರಿ ವಂಶದ ರಾಜರುಗಳು ಕೊಡಗನ್ನು ವಶ ಪಡಿಸಿ ಆಳದಿದ್ದ ಪಕ್ಷದಲ್ಲಿ ಮಡಿಕೇರಿಯಿಂದ ದಕ್ಷಿಣಕ್ಕಿರುವ ಕೊಡಗು ಈ ರಾಜ ವಂಶವು ರಾಜ್ಯಭಾರ ಮಾಡುವ ಮೊದಲು ಒಂದಲ್ಲ ಒಂದು ರೀತಿಯಲ್ಲಿ ಮಲೆಯಾಳಿ ಸಂಸ್ಕೃತಿ ಮತ್ತು ರಾಜ್ಯಭಾರಕ್ಕೆ ಒಳ ಪಟ್ಟಿದ್ದು ಈ ಭಾಗದ ಕೊಡಗು ಕೇರಳಕ್ಕೆ ಸೇರುವಂತಹ ಪರಿಸ್ಥಿತಿಯಾಗುತ್ತಿತ್ತೆಂಬ ಸಂಶಯ ಉಂಟಾಗುತ್ತದೆ.

ಹಾಲೇರಿ ವಂಶದ ರಾಜರುಗಳು ಕನ್ನಡಿಗ ರಾಗಿದ್ದುದರಿಂದ ಕೊಡಗಿನ ಜನರ ಆಡಳಿತ ಭಾಷೆಯು ಕನ್ನಡವಾಗಿ ಮುಂದುವರಿದು ಕೊಡಗು ಇಂದು ಕರ್ನಾಟಕದ ಭಾಗವಾಗಿ ಉಳಿದಿದೆ ಎಂದು ಹೇಳಬಹುದು. ಅದೂ ಅಲ್ಲದೆ ಕೊಡಗಿನಲ್ಲಿರುವ ಕೊಡವರ ವಿಶಿಷ್ಟ ರೀತಿಯ ಸಂಸ್ಕೃತಿಗೆ ಹಾಲೇರಿ ವಂಶದ ರಾಜರು ತಕ್ಕ ಪ್ರೋತ್ಸಾಹ, ಮನ್ನಣೆ ಯನ್ನು ನೀಡಿ ಅದರ ಅಭಿವೃದ್ಧಿಗೆ ಸಹ ಕರಿಸಿದ್ದಾರೆ. ಲಿಂಗರಾಜೇಂದ್ರ ಒಡೆಯರು 54 ಹುಕುಂನಾಮೆಗಳನ್ನು ಹೊರಡಿಸಿ ಕೊಡಗಿನಲ್ಲಿ ಸಾಂಸ್ಕೃತಿಕ ಮತ್ತು ಆರ್ಥಿಕ ವಿಚಾರಗಳಲ್ಲಿ ಪ್ರಜೆಗಳು ಹೇಗೆ ನಡೆದು ಕೊಳ್ಳಬೇಕೆಂದು ವ್ಯವಸ್ಥೆಯನ್ನು ಮಾಡಿ ದರು. ಇದರಿಂದಾಗಿ ಸಮಾಜಗಳಲ್ಲಿ, ಗ್ರಾಮಗಳಲ್ಲಿ, ನಾಡಿನಲ್ಲಿ, ಹಾಗೂ ರಾಜ್ಯದ ಸಾಮಾಜಿಕ ಜೀವನವು ಒಂದು ಚೌಕಟ್ಟಿ ನಲ್ಲಿ ನಡೆಯುವಂತಾಯಿತು.

ಮೇಲಿನ ಕಾರಣಗಳಿಂದ ಕೊಡಗಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರಜೆ ಗಳು ರಾಜ್ಯವನ್ನು ಕಳೆದುಕೊಂಡಿದ್ದ ಕೊಡಗಿನ ಕೊನೆಯ ರಾಜನಾಗಿದ್ದ ಹಾಲೇರಿ ವಂಶದ ಚಿಕ್ಕವೀರರಾಜೇಂದ್ರರ ಪರವಾಗಿ, ಚಿಕ್ಕವೀರರಾಜೇಂದ್ರರನ್ನು ಪುನಃ ಕೊಡಗಿನ ರಾಜರನ್ನಾಗಿ ಮಾಡಲು ಕಂಕಣಬದ್ಧರಾದರು. ಭಾರತೀಯರು ಒಗ್ಗಟ್ಟಿಲ್ಲದ ಕಾರಣ ಪರಕೀಯರ ದಾಸ್ಯಕ್ಕೆ ಕ್ರಿ. ಪೂ. 4ನೇ ಶತಮಾನದಿಂದ ಇಲ್ಲಿಯ ವರೆಗೆ ನಡೆದಿರುವ ಘಟನೆಗಳಂತೆ ಈ ಸಂಗ್ರಾಮವೂ ವಿಫಲವಾಯಿತು.

ಸ್ವಾತಂತ್ರ್ಯಕ್ಕಿಂತ ಮೊದಲು ಬ್ರಿಟಿಷರಿಗೆ ಹೆದರಿಯೋ ಚರಿತ್ರೆ ಬರೆದವರು ಈ ಸಂಗ್ರಾಮವನ್ನು ಪುಂಡದಂಗೆ ಎಂದು ಕರೆದುದಕ್ಕೆ ಸತ್ಯಾಂಶವಿಲ್ಲದಿದ್ದರೂ ಶೋಚ ನೀಯ ಸಂಗತಿಯಾಗದು. ಭರತಖಂಡದ ಚರಿತ್ರೆಯನ್ನು ತಿಳಿಸಿದವರು ಬ್ರಿಟಿಷರೇ ಆದುದರಿಂದ ಅವರ ಬರಹಗಳಲ್ಲಿ ಪಕ್ಷಪಾತ ಅಂಶವನ್ನು ಗುರುತಿಸಬಹುದು. ಆದರೆ ಸ್ವಾತಂತ್ರ್ಯ ನಂತರ 'ಬರೆದ ಇತಿಹಾಸ ಕಾರರು ಈ ಸಂಗ್ರಾಮವನ್ನು ಹಿಂದಿನವರು ಕರೆದಂತೆ ವರ್ಣಿಸಿರುವುದು ಶೋಚನೀಯ ಸಂಗತಿಯಾಗಿದೆ. ಈ ಸಂಗ್ರಾಮಕ್ಕೆ ಸರಿ ಯಾದ ಮನ್ನಣೆಯನ್ನು ಕೊಟ್ಟು ಸ್ವಾತಂತ್ರ್ಯ ಸಂಗ್ರಾಮವೆಂದು ಪರಿಗಣಿಸಿ ತಮ್ಮ ಚಾರಿತ್ರಿಕ ಕಾದಂಬರಿಯಾಗಿ ಪ್ರಕಟಿಸಿದ ಶ್ರೀ ನಿರಂಜನ್‌ರವರ 'ಕಲ್ಯಾಣ ಸ್ವಾಮಿ' ಕಾದಂಬರಿಯು ನಿಜವಾಗಿಯೂ ಶ್ಲಾಘನೀಯವಾಗಿದೆ. ಇತಿಹಾಸದ ವಸ್ತು ವನ್ನು ಆರಿಸಿಕೊಂಡ ಈ ಕಾದಂಬರಿ ಕೇವಲ ಕಲ್ಪನೆಯಿಂದ ಕೂಡಿರದೆ ವಾಸ್ತವ್ಯಕ್ಕೆ ಹತ್ತಿರವಾಗಿರುವುದು ಗಮನೀಯ.

[ಮುಂದಿನ ಸಂಚಿಕೆಗೆ]

ನಿಮಗಿದು ಗೊತ್ತೆ ?

1. ಇಂಗ್ಲೀಷ್ ಕಡಲ್ಗಾಲುವೆಯನ್ನು ಈಜಿದ ಮೊದಲ ಭಾರತೀಯ ಮಹಿಳಾ ಈಜುಗಾರ್ತಿ –ಅನಿತಾಸೂದ್.

2. ಭಾರತದಲ್ಲಿ ಅತೀ ದೀರ್ಘವಾದ ಕರಾವಳಿ ಪ್ರದೇಶವನ್ನು ಹೊಂದಿರುವ ರಾಜ್ಯ –ಗುಜರಾತ್.

3. ನಮ್ಮ ದೇಶದಲ್ಲಿರುವ ಆಸ್ಪತ್ರೆಗಳಲ್ಲಿ ದಾದಿಯರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೇವೆ ಸಲ್ಲಿಸುತ್ತಿರುವವರು –ಕೇರಳದ ಹೆಣ್ಣುಮಕ್ಕಳು. ಅಂದರೆ ಅವರು ಒಟ್ಟು ದಾದಿಯರ ಪೈಕಿ ಶೇಕಡ 18 ಮಂದಿ ಇದ್ದಾರೆ.

4. ಶೇಕ್ಸ್‌ಪಿಯರ್ ರಚಿಸಿದ ನಾಟಕಗಳಲ್ಲಿ ಅತೀ ಹೆಚ್ಚು ಬಾರಿ ಪ್ರದರ್ಶನ ಗೊಂಡ ನಾಟಕ –ಹ್ಯಾಮ್ಲೆಟ್.

● **ಪೊನ್ನೇಟ ಬಿ. ಸುನಿಲ್**, ಭಾಗಮಂಡಲ

ನಮ್ಮ ರಾಜಕಾರಣಿ

ಬಾಯಲ್ಲಿ ಬಡ-ಬಡ ಎನ್ನುವನು
ಜನರನು ಮಂಗನ ಮಾಡುವನು
ಅಧಿಕಾರದ ಸೀಟನು ಹಿಡಿಯುವನು
ದೇಶಕ್ಕೆಲ್ಲಾ 'ನಾನೇ' ಎನ್ನುವನು

ಹಿಂದೆ-ಮುಂದೆಯಲ್ಲಾ ಭದ್ರತಾ ಪಡೆಯು
ಒಳ್ಳೆಯವನಿಗೇಕೆ ಆ ಭದ್ರತೆಯು
ಜನರಿಂದ ಏಕೆ ಅವನಿಗೆ ಹೆದರಿಕೆಯು
ಅವನಿಗೂ ಗೊತ್ತು ಅವನ ಮೋಸಗಾರಿಕೆಯು

ಕೇಳುವೆವು ನಾವು ಹಗರಣದ ಸರಮಾಲೆಯ
ಮಾಡುವನವ ಕೋಟಿ ಕೋಟಿ ಹಣವ
ನಾವೆಂದೂ ಕರೆಯುವೆವು 'ಹಗರಣಕಾರ'ನೆಂದು
ನಾವೆಂದೂ ಕರೆಯದಿರುವೆವು 'ಕಳ್ಳ' ನೆಂದು

ಸೀಟಿಗೆ ಜಗಳವು ಶುರುವಾಯ್ತು
ಹಗರಣವು ಬೆಳಕಿಗೆ ಬಂದಾಯ್ತು
ಜೈಲಿಗೆ ಅವನು ಹೋಗಾಯ್ತು
ಕೂಡಲೇ ಹೊರಗೆ ಬಂದಾಯ್ತು

ದೇಶದಲಿ ಬಡತನ ಉಳಿದೋಯ್ತು
ಪ್ರಪಂಚಲಿ ದೇಶವು ಹಿಂದಾಯ್ತು
ವೈರಿ ದೇಶಕ್ಕೆ ಖುಷಿ ಆಯ್ತು
ಬಡತನವೇ ನಮ್ಮ ವರವಾಯ್ತು.

●**ಕೋಟೆಮನೆ ಮನೋಹರ,**
ಮದೆನಾಡು

ನಗೆ ಹನಿಗಳು

ಪ್ರಭು : ನನ್ನ ಮಾವನಾದ 40 ವರ್ಷದ ತರುಣನಿಗೆ 36 ವರ್ಷದ ತರುಣಿ ಬೇಕಾಗಿದ್ದಾಳೆ. ಎಲ್ಲಿಯಾದರೂ ಇದ್ದಾರೆಯೇ ?

ಮಂಗೇಶ : 36 ವರ್ಷದ ತರುಣಿ ಇಲ್ಲ. ಆದ್ದರಿಂದ 18 ವರ್ಷದ ಇಬ್ಬರು ತರುಣಿಯರು ಆಗಬಹುದೇ ?

❁ ❁ ❁

ಉಪಾಧ್ಯಾಯರು : ರಾಮು, ಅಶೋಕನು ಮಾರ್ಗದ ಬದಿಯಲ್ಲಿ ಏಕೆ ಮರವನ್ನು ನೆಡಿಸಿದನು ?

ರಾಮು : ಮಧ್ಯದಲ್ಲಿ ನೆಟ್ಟರೆ ವಾಹನಗಳಿಗೆ ಹೋಗಲು ಕಷ್ಟವಾಗುತ್ತದೆ ಅದಕ್ಕೆ ಸಾರ್ !

●**ಕೊಂಪುಳಿ ಎಸ್. ಸಂದೀಪ್**
ಮದೆನಾಡು

ಸುವರ್ಣ ಮಹೋತ್ಸವ

ಐಕೊಳ ಗ್ರಾಮದ ಶ್ರೀ ಅಯ್ಯಪ್ಪ ಯುವಕ ಮತ್ತು ಯುವತಿ ಮಂಡಳಿಯವರ ಸಂಯುಕ್ತ ಆಶ್ರಯದಲ್ಲಿ 15-8-97ರಂದು 11-30 ಗಂಟೆಗೆ ನೆರವೇರಿತು. 50ನೇ ಸ್ವಾತಂತ್ರ್ಯೋತ್ಸವ ವನ್ನು ಸಂಘದ ಅಧ್ಯಕ್ಷರಾದ ಕೊಂಪುಳೀರ ಗಣೇಶ್ ಬೋಪಯ್ಯರವರು ದೇಶದ ತ್ರಿವರ್ಣ ಧ್ವಜವನ್ನು ಹಾರಿಸಿದರು. ಸಿಹಿಯನ್ನು ಗ್ರಾಮಸ್ಥರಿಗೆ ಹಂಚುವ ಮೂಲಕ ಸಂಭ್ರಮ ದಿಂದ ಆಚರಿಸಿದರು.

[8ನೇ ಪುಟದಿಂದ]

ಮನೆ ಕೆಲಸದ ಹೊರೆಯು ಅವಳ ಮೇಲೆ ಬೀಳುತ್ತದೆ. ಇಂತಹ ವಾತಾವರಣದಲ್ಲಿ ಬೆಳೆದ ಹುಡುಗಿ ತನಗೆ ಶಕ್ತಿಯಿದ್ದರೂ ಮೇಲೆ ಬರಲಾರದಕ್ಕೆ ನಿರಾಸೆಗೊಂಡು ಭ್ರಮಾಲೋಕದ ಕತೆ ಕಾದಂಬರಿಗಳತ್ತ ಆಕರ್ಷಿತಳಾಗುತ್ತಾಳೆ. ವಾಸ್ತವ ಜಗತ್ತಿನ ರಾಜಕೀಯ ಆಗು ಹೋಗುಗಳು, ವರ್ಣಭೇದ ನೀತಿ ಮುಂತಾದ ವಿಷಯಗಳು ಅವಳನ್ನು ಕಾಡುವುದೇ ಇಲ್ಲ. ಹೊರ ಜಗತ್ತಿನ ಸಂಪರ್ಕ ಕಡಿಮೆ. ಇವೆಲ್ಲಕ್ಕೆ ಶಿಖರವಿಟ್ಟಂತೆ ಬಹುತೇಕ ಮನೆಗಳಲ್ಲಿ ಹುಡುಗಿಯನ್ನು ಬುದ್ಧಿ ಜೀವಿಯಾಗಿ ಬೆಳೆಸುವ ಬದಲು ಅವಳನ್ನು ಮದುವೆಗೆ ಮತ್ತು ಗೃಹಿಣಿಯ ಪಟ್ಟಕ್ಕೆ ಯೋಗ್ಯಳಾಗುವಂತೆ ಮಾತ್ರ ಬೆಳೆಸಲಾಗುತ್ತಿದೆ. ಇತ್ತೀಚೆಗೆ ಅನೇಕ ಮಹಿಳೆಯರು ಉದ್ಯೋಗಸ್ಥರಾಗಿ ಆರ್ಥಿಕ ಸ್ವಾತಂತ್ರ ಪಡೆದಿದ್ದರೂ ಸಂಸಾರದಲ್ಲಿ ಅವಳ ಬುದ್ಧಿಶಕ್ತಿಗೆ ಮಾನ್ಯತೆ ದೊರೆತಿಲ್ಲ.

ಇಂಥ ಒಂದು ಸ್ಥಿತಿ ಬದಲಾಗಿ ಹೆಣ್ಣು ಗಂಡು ಮಕ್ಕಳನ್ನು ಸಮಾನ ಬುದ್ಧಿ ಜೀವಿಗಳಾಗಿ ಬೆಳೆಸಬೇಕೆಂದರೆ ನಮ್ಮ ಸಮಾಜದ ಒಟ್ಟು ಧೋರಣೆಯೇ ಬದಲಾಗಬೇಕು. ತಂದೆ ತಾಯಿಗಳಿಗೆ ಈ ಅಗತ್ಯದ ಬಗ್ಗೆ ಸ್ಪಷ್ಟ ಅರಿವಿರಬೇಕು. ಅವರು ವಿದ್ಯಾವಂತರು, ವಿಶಾಲ ಮನೋಭಾವದವರು ಆದರೆ ಮಾತ್ರ ಈ ಬದಲಾವಣೆ ಸಾಧ್ಯ.●

ಹರಟೆ

ಬೆಳಿಗ್ಗೆ ಎಚ್ಚರವಾಗುವ ಹೊತ್ತಿಗೆ ಎಂದಿಗಿಂತ ಹೆಚ್ಚು ತಡವಾಗಿತ್ತು. ಏಕೆಂದರೆ ರಾತ್ರಿ ಹನ್ನೆರಡು–ಒಂದು ಗಂಟೆ ವರೆಗೆ ಟಿ. ವಿ.ಯಲ್ಲಿ ಬರುತ್ತಿದ್ದ ಸಿನಿಮಾ ನೋಡಿದ್ದು. ರೂಮಿನಿಂದ ಹೊರಗೆ ಬಂದಾಗ ಟಿ.ವಿ.ಯಲ್ಲಿ ಪ್ರಧಾನ ಮಂತ್ರಿಗಳ ಭಾಷಣ ಬರುತ್ತಿತ್ತು. ಕೆಂಪು ಕೋಟೆಯ ಬಳಿಯಿಂದ, ಅದರ ಜೊತೆಗೆ ಕೇಳಿ ಬಂತು ಅಮ್ಮನ ಧ್ವನಿ "ಎಲ್ಲಾ ಪ್ರಧಾನ ಮಂತ್ರಿಯರು ಕಾಲು–ಅರ್ಧ ಗಂಟೆಯೊಳಗೆ ಭಾಷಣ ಮುಗಿಸಿದರೆ ಈತನ ಭಾಷಣ ಒಂದು ಗಂಟೆಯಾದರೂ ಮುಗಿಯುತ್ತಿಲ್ಲ" ಆಗ ಹೊಳೆಯಿತು ಈ ದಿನ ಸ್ವಾತಂತ್ರ್ಯ ದಿವಸವೆಂದು. ಅದೂ ಐವತ್ತನೆಯ (ಚಿನ್ನದ) ವರ್ಷದ ಸ್ವಾತಂತ್ರ್ಯೋತ್ಸವ.

ನಿತ್ಯ ಕರ್ಮ ಮುಗಿಸಿಕೊಂಡು ಬಂದಾಗ ಕಾಫಿಯನ್ನು ತಂದುಕೊಡುತ್ತ ಅಮ್ಮ ಹೇಳಿದಳು ಎದುರು ಮನೆಯ ಹುಡುಗಿಯು ತನ್ನ ನೂತನ ಅಂಗಡಿಯ ಉದ್ಘಾಟನೆಗೆ ಅಹ್ವಾನಿಸಿರುವಳು ಎಂದು. ತಿಂಡಿ ತಿನ್ನುತ್ತಾ ಕನ್ನಡ ಕಸ್ತೂರಿಯ ಉದಯ (ನಿರೂಪಕ [ಕಿಯು]ರ ಬಾಯಲ್ಲಿ ಉದಿಯ) ಟಿ.ವಿ.ಯನ್ನು ವೀಕ್ಷಿಸುತ್ತಿದ್ದೆ. ನಮ್ಮ ದೇಶಕ್ಕೆ ರಾತ್ರಿಯ ಹೊತ್ತಿನಲ್ಲಿ ದೊರೆತ ಸ್ವಾತಂತ್ರ್ಯದ ಬಗ್ಗೆ ಎರಡು ಪಂಗಡಗಳಿಂದ ಪರ ಹಾಗೂ ವಿರೋಧವಾಗಿ ವಾದ-ವಿವಾದಗಳು ನಡೆಯುತ್ತಿತ್ತು. ಅವರಲೊಬ್ಬರು ಹೇಳುತ್ತಿದ್ದರು. ರಾತ್ರಿಯ ನಿದ್ದೆಯಲ್ಲಿದ್ದಾಗ ಬಡಿದೆಬ್ಬಿಸಿ ಬಂದ ಸ್ವಾತಂತ್ರ್ಯದಿಂದ ಜನ ಇನ್ನು ಎಚ್ಚರಗೊಂಡಿಲ್ಲ. ಇನ್ನೂ ಕೂಡ ಕತ್ತಲೆಯಲ್ಲಿಯೇ ಇದ್ದಾರೆ. ಬೆಳಕಿನೆಡೆಗೆ ಬಂದಿಲ್ಲ. ಹೊರಗಡೆ ಹೊರಟರೆ ಬಸ್ಸು ಸಿಗುವುದಿಲ್ಲ. ಆಟೋದವರು ಕರೆದರೆ ಬರುವುದಿಲ್ಲ. ಬೆಳಗಿನ ಹೊತ್ತು ವಿದ್ಯುತ್ ಇರುವುದಿಲ್ಲ. ಆಫೀಸಿಗೆ ಹೊರಡುವ ವೇಳೆಗೆ ಬರುತ್ತದೆ. ಆಫೀಸು ತಲುಪಿದಾಗ ಅಲ್ಲಿನ ವಿದ್ಯುತ್ ಹೋಗಿರುತ್ತದೆ ಎನ್ನುತ್ತಿದ್ದ ಹಾಗೆ ನಮ್ಮ ಮನೆಯ ವಿದ್ಯುತ್ ಕೂಡ ಹೇಳದೆ ಹೋಯಿತು. ಸ್ವಾತಂತ್ರ್ಯದ ದಿವಸವಾದರೂ ವಿದ್ಯುತ್ತಿನ ಜೊತೆಗೆ ನೀರು ಕೂಡ ಇರಲಿಲ್ಲ.

ಸ್ವಲ್ಪ ಹೊತ್ತಿನ ನಂತರ ಪಕ್ಕದ ಮನೆಯ ಆಂಟಿ ಕಂಡಕೂಡಲೇ ಶುರು ಮಾಡಿದರು. ತಮ್ಮ ಬೆಳಗಿನ ಆಲಾಪವನ್ನು "ನಮ್ಮ ಬೀದಿಯವರೆಲ್ಲಾ ಹೋಗುತ್ತಿದ್ದಾರೆ ಉದ್ಘಾಟನೆಗೆ ನಾವೂ ಕೂಡ ಹೋಗದಿದ್ದರೆ ಹೇಗೆ ದಿನಾ ಬೆಳಗಾದರೆ ಮುಖ ನೋಡಬೇಕಲ್ಲ. ಮನೆಯಲ್ಲಿ ಕೂಡ ಯಾರು ಇಲ್ಲ ಹೇಗೆ ಹೋಗುವುದು. ಆ ಸ್ಥಳಕ್ಕೆ ಸಿಟಿ ಬಸ್ಸು ಹೋಗುವುದಿಲ್ಲ. ಸರಿ ನನ್ನ ವಾಹನವನ್ನು ಹೊರತೆಗೆದು ಅವರನ್ನು ಕರೆದುಕೊಂಡು ಹೊರಟು ಅಲ್ಲಿ ತಲುಪಿದೆವು. ಅವಳು ತೆರೆದದ್ದು ಸಾರ್ವಜನಿಕ ದೂರವಾಣಿ ಕೇಂದ್ರ. ಆದರೆ ಅಲ್ಲಿ ಉಪಕರಣಗಳೇ ಇರಲಿಲ್ಲ. ವಿಚಾರಿಸಿದಾಗ ತಿಳಿಯಿತು ಇವತ್ತು ಲಕ್ಷ್ಮಿ ಪೂಜೆಯ ದಿವಸ, ಒಳ್ಳೆಯ ದಿನ ಹಾಗಾಗಿ ಇವತ್ತು ಇಟ್ಟುಕೊಂಡಿದ್ದರು. ಅವಳಿಗೆ ಶುಭಾಶಯ ತಿಳಿಸಿ ಹಿಂತಿರುಗಿದೆವು.

ಸಂಜೆ ಸುತ್ತಾಡಲೆಂದು ಹೊರಟೆ ವಾಪಸ್ಸು ಬರುವಾಗ ಇದ್ದಕ್ಕಿದ್ದಂತೆ ಅಡ್ಡ ರಸ್ತೆಯಿಂದ ಹತ್ತಿಪ್ಪತ್ತು ದ್ವಿಚಕ್ರ ವಾಹನಗಳು ವೇಗದಿಂದ ಮುಖ್ಯ ರಸ್ತೆಯ ಕಡೆ ನುಗ್ಗಿದವು ಬಿಸಿ ರಕ್ತದ ತರುಣರು. ಸುಮ್ಮನೆ ಗಾಡಿ ಓಡಿಸುತ್ತಿರಲಿಲ್ಲ. ಒಕ್ಕೊರಲಿನಿಂದ ಕೂಗುತ್ತಿದ್ದರು. 'ವಂದೇ ಮಾತರಂ', 'ಭಾರತ್ ಮಾತಾಕಿ ಜೈ'. ಇದರ ಜೊತೆಗೆ ಮತ್ತೊಂದು ಕೂಗು ಕೇಳಿಸಿತು "ಸಿರಿಕನ್ನಡಮ್ಮನ ಗಲ್ಲಿಗೆ" ಎಂದು. ಅರೆ ! ಇದೇನಿದು ಅಭಾಸ. ಮತ್ತೊಮ್ಮೆ ಸರಿಯಾಗಿ ಆಲಿಸಿದಾಗ ಕೇಳಿಸಿತು ಒಬ್ಬ ಕನ್ನಡಮ್ಮನ ಕುಲಪುತ್ರನ ಬಾಯಿಂದ "ಸಿರಿ ಗನ್ನಡಂ ಗೆಲ್ಗೆ". ನಮ್ಮ ಸಮಾಜದಲ್ಲಿ ಪ್ರತಿಷ್ಠೆಗೋಸ್ಕರ ತಮ್ಮ ಮಕ್ಕಳನ್ನು ಆಂಗ್ಲ ಶಾಲೆಗೆ ಸೇರಿಸುತ್ತಾರೆ. ಹಾಗಾಗಿ ಈ ಅಸಂಬದ್ಧ ಕನ್ನಡ ಬಂದದ್ದು ಎಂದುಕೊಂಡೆ. ಅವರ ವಾಹನಗಳ ಮುಂದೆ ನಮ್ಮ ದೇಶದ ತ್ರಿವರ್ಣ ಧ್ವಜ ಹಾರಾಡುತ್ತಿತ್ತು. ಹಾಗೆಯೇ ಅವರುಗಳ ಮುಖದ ಮೇಲೆ ಕೂಡ ರಾಷ್ಟ್ರಧ್ವಜದ ಬಣ್ಣವನ್ನು ಬಳಿದುಕೊಂಡಿದ್ದರು. ನಮ್ಮ ದೇಶ ತುಂಬಾ ವೇಗವಾಗಿ ಮುಂದುವರಿಯಬೇಕೆಂದು ನಮ್ಮ ನಾಯಕರು ಉದ್ದುದ್ದ ಭಾಷಣ ಬಿಗಿಯುತ್ತಾರೆ. ಇದೆಲ್ಲದರ ಜೊತೆ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಅವರಿಗೆ ಕಷ್ಟ ಬರದ ಹಾಗೆ ಇರಲು ಸ್ವಾತಂತ್ರ್ಯ ಕೊಡುತ್ತಾರೆ. ಮುಂದುವರಿದ ರಾಷ್ಟ್ರಗಳ ಸಾಲಿಗೆ ವೇಗವಾಗಿ ಸೇರುವ ತವಕದಂತೆ ಕಂಡಿತು ಆ ತರುಣರ ವಾಹನಗಳ ವೇಗ ಹಾಗೂ ಅವರ ಘೋಷಣೆ.

ಹಿಂದಿನಿಂದ ಹೆಣ್ಣು ಮಕ್ಕಳು ಕೂಡ ಹೋಗುತ್ತಿದ್ದರು. ಕೆಲವರು ತಮ್ಮ ವಾಹನಗಳಲ್ಲಿ, ಕೆಲವರು ನಡೆದುಕೊಂಡು ಒಬ್ಬರ ಮನೆಯಿಂದ ಇನ್ನೊಬ್ಬರಲ್ಲಿಗೆ ಲಕ್ಷ್ಮಿ ಪೂಜೆಯ ದಿನದಂದು ಕುಂಕುಮಕ್ಕೆ ಕರೆಯಲು ಹಾಗೆಯೇ ಅವರ ಪಂಚಯುದ ಮನೆಯಿಂದ ಕುಂಕುಮ ತೆಗೆದುಕೊಳ್ಳಲು. ಇಷ್ಟೆಲ್ಲವನ್ನು ಕಾಣುತ್ತಾ ಸ್ವಾತಂತ್ರ್ಯ ದಿನಾಚರಣೆಯ ಸವಿಯನ್ನು ಅನುಭವಿಸಿದೆ ಎಲ್ಲರೊಡನೊಬ್ಬನಾಗಿ.

–ಕುಂಬಗೌಡನ ವಿನೋದ್ ದೇವಯ್ಯ
ಮೈಸೂರು.

50ನೇ ವರ್ಷದ ಸ್ವಾತಂತ್ರ್ಯೋತ್ಸವದ ವಿಶೇಷ ಲೇಖನ

ಕೊಡಗಿನ ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರ ಧ್ವಜವೀರ ಪೂಜಾರಿಮನೆ ದಿ|| ಸಣ್ಣಯ್ಯ ರಾಮಪ್ಪ

ದಿ|| ಕೋ. ಸ. ಕಾರ್ಯಪ್ಪ
ಬಲ್ಲಮಾವಟಿ

ಪೂಜಾರಿ ಮನೆ ರಾಮಪ್ಪನವರು 1912ನೇ ಇಸವಿಯಲ್ಲಿ ಹುಟ್ಟಿದ್ದು. ಮಡಿಕೇರಿ ಸೆಂಟ್ರಲ್ ಪ್ರೌಢ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಮಯದಲ್ಲಿಯೇ ಗಾಂಧೀಜಿಯವರ ಅಸಹಕಾರ ಚಳುವಳಿಯ ಕೂಗಿಗೆ ಓಗೊಟ್ಟು ರಾಜಕೀಯ ರಂಗಕ್ಕೆ ಧುಮುಕಿದರು.

1930–1931ರಲ್ಲಿ ಧ್ವಜವಂದನೆಯ, ಸೇಂದಿ, ಸಾರಾಯಿ ಅಂಗಡಿಗಳ ಮುಂದೆ ಕುಡಿಯುವವರನ್ನು ತಡೆ ಮಾಡುವದು, ಬ್ರಿಟಿಷ್ ಸರಕಾರದ ಆಜ್ಞೆಯ ಉಲ್ಲಂಘನೆ, ಮುಂತಾದ ಕಾಂಗ್ರೆಸ್ಸಿಗರ ರಾಷ್ಟ್ರೀಯ ಚಳುವಳಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಸತ್ಯಾಗ್ರಹಗಳಲ್ಲಿ ಅವರು ಪಾಲುಗೊಂಡಿದ್ದರು.

ಇದರಿಂದಾಗಿ ಇವರನ್ನು ಬ್ರಿಟಿಷ್ ಸರಕಾರವು ಬಂಧಿಸಿ, ದಂಡ ಮತ್ತು ಸೆರೆವಾಸವನ್ನು ವಿಧಿಸಿತ್ತು.

ದಿನಾಂಕ 25–10–1932ರಂದು ಮಧ್ಯರಾತ್ರಿಯಲ್ಲಿ ಮಡಿಕೇರಿ ಕೋಟೆಯಲ್ಲಿ ಬ್ರಿಟಿಷರ ಯೂನಿಯನ್ ಧ್ವಜ ಗಡಿಯಾರ ಕಂಬದ ಮೇಲೆ ಹಾರುತಿತ್ತು. ಅದನ್ನು ಕಂಡ ಕೂಡಲೇ ಅವರು ಸಾಹಸದಿಂದ ಹತ್ತಿ ಅಂದು ಗಡಿಯಾರ ಕಂಬದ ಮೇಲೆ ಹಾರಾಡುತ್ತಿದ್ದ ಬ್ರಿಟಿಷ್ ಸರಕಾರದ ಧ್ವಜವನ್ನು ಕೆಳಗಿಳಿಸಿ ಕಾಂಗ್ರೆಸ್ ತ್ರಿವರ್ಣ ಧ್ವಜವೇರಿಸಿ, “ವಂದೇಮಾತರಂ” ಗೀತೆಯನ್ನು ಹಾಡಿದರು. ಭಕ್ತಿಯಿಂದ ರಾಷ್ಟ್ರ ಪ್ರೇಮದಿಂದ ಶಿಸ್ತಿನಿಂದ ಅವರು ಧ್ವಜವಂದನೆ ಮಾಡಿ ಅಷ್ಟೊಂದು ಎತ್ತರದಿಂದ ಪ್ರಾಣದಾಸೆಯನ್ನು ತೊರೆದು, ಕೆಳಗೆ ಧುಮುಕಿ ಕಾಲ್ನಡಿಗೆಯಲ್ಲಿ ರಾತ್ರಿ ವೇಳೆ ಅತಿ ಪ್ರಯಾಸದಿಂದ ನಡೆದು ಗೋಣಿಕೊಪ್ಪಲನ್ನು ಸೇರಿದರು. ಗೋಣಿಕೊಪ್ಪಲಿನಲ್ಲಿ ಸ್ವಾತಂತ್ರ್ಯದ ಬಗ್ಗೆ ಹಸ್ತ ಪತ್ರಿಕೆಗಳನ್ನು ಹಂಚುತ್ತಾ ಜಯ ಘೋಷ ಮಾಡಿ ಸಭೆ ಸೇರಿಸಲು ಯತ್ನಿಸಿದಾಗ ಅವರನ್ನು ಪೊಲೀಸರು ದಸ್ತಗಿರಿ ಮಾಡಿ ಕಾಲ್ನಡಿಗೆಯಲ್ಲಿಯೇ ಮಡಿಕೇರಿಗೆ ಕರೆ ತಂದರು. ಪೊಲೀಸರು ಅವರ ಮೇಲೆ ಆಪಾದನೆ ಹೊರಿಸಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದಾಗ ಆರು ತಿಂಗಳುಗಳ ಕಾಲ ಸಜೆ ವಿದಿಸಿ ಅವರನ್ನು ಕಾಲ್ನಡಿಗೆಯಲ್ಲಿಯೇ ವಿರಾಜಪೇಟೆಗೆ ಒಯ್ದು ನಂತರ ದೂರದ ಕಣ್ಣಾನೂರು ಜೈಲಿಗೆ ಕಳುಹಿಸಲಾಯಿತು.

ಕಣ್ಣಾನೂರು ಜೈಲಿನಿಂದ ಮರಳಿ ಬಂದ ನಂತರ ತನ್ನ ಹುಟ್ಟೂರಾದ ಬಿಳಿಗೇರಿ ಗ್ರಾಮದಲ್ಲೊಂದು ರಾಷ್ಟ್ರೀಯ ಶಿಕ್ಷಣ ಶಾಲೆಯನ್ನು ತೆರೆದು ವಿದ್ಯಾರ್ಥಿಗಳಿಗೂ ಮತ್ತು ಸುತ್ತಮುತ್ತಲ ಹಳ್ಳಿಯ ಜನರಿಗೂ ಖಾದಿಯ ಪ್ರಚಾರ ಕಾರ್ಯವನ್ನು ಆರಂಭಿಸಲು ತಕಲಿಯಲ್ಲಿ ಮತ್ತು ಚರಕಾದಲ್ಲಿ ನೂಲುವ ತರಭೇತಿಯ ಏರ್ಪಾಟನ್ನು ಮಾಡಿ, ಖಾದೀ ಪ್ರಚಾರ ಮೂಲಕ ರಾಷ್ಟ್ರೀಯ ಕಾರ್ಯದಲ್ಲಿ ಸಾಕಷ್ಟು ಸೇವೆ ಸಲ್ಲಿಸಿದರು.

1941ರಲ್ಲಿ ವೈಯಕ್ತಿಕ ಸತ್ಯಾಗ್ರಹಿಗಳ, ತರಭೇತಿ ಶಿಬಿರದಲ್ಲಿ ಭಾಗವಹಿಸಿ, ವ್ಯಕ್ತಿಗತ ಸತ್ಯಾಗ್ರಹವಲ್ಲೂ ಪ್ರತಿಜ್ಞೆ ಕೈಗೊಂಡರು.

1942ರಲ್ಲಿ “ಬ್ರಿಟಿಷರೇ ಭಾರತದಿಂದ ತೊಲಗಿರಿ” ಎಂಬ ಚಳುವಳಿಯಲ್ಲಿ ಭಾಗವಹಿಸಿ, ಸೆರೆಮನೆಗೆ ಸೇರಿದರು.

ರಾಮಪ್ಪನವರು ಈ ರೀತಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನ ತನು ಮನವನ್ನು ತ್ಯಾಗ ಭಾವನೆಯಿಂದ ಅರ್ಪಣೆ ಮಾಡುವುದರೊಂದಿಗೆ, ಆಜನ್ಮ ಪರ್ಯಂತರ ಬ್ರಹ್ಮಚಾರಿಯಾಗಿಯೇ ಉಳಿದು, ಯಾವುದೇ ಸುಖವನ್ನು ಅನುಭವಿಸದೆ, ರಾಷ್ಟ್ರ ಚಿಂತನೆಯಿಂದ ಕಾಲ ಕಳೆದರು ಕೊನೆಗೆ ಅವರು ಒಂದು ರೀತಿಯ ಚಿಂತೆ ಕಾಯಿಲೆಗೆ ತುತ್ತಾಗಿ, ಕೋಟೆಯ ಆಸ್ಪತ್ರೆಗೆ ಸೇರಿ, ಚಿಕಿತ್ಸೆಯ ನಂತರ ಚೇತರಿಸಿಕೊಂಡು, ಪುನಃ ತನ್ನ ಹುಟ್ಟೂರಾದ ಬಿಳಿಗೇರಿಗೆ ಬಂದು ನೆಲೆಸಿದರು. ಅಲ್ಲಿ ನಿಸ್ವಾರ್ಥತೆಯಿಂದ ರಾಷ್ಟ್ರೀಯ ಸೇವೆಗೈಯ್ಯುತ್ತಿರುವಾಗ್ಯೆ ಅಂದಿನ ಕೊಡಗು ಸಿ: ಸಂಸ್ಥಾನದ ಇಬ್ಬರು ಮಂತ್ರಿಗಳಾಗಿದ್ದ ಸಿ. ಯಂ. ಪೂಣಚ್ಚನವರು ಮತ್ತು ಕೆ. ಮಲ್ಲಪ್ಪನವರು ಇವರನ್ನು ಕರೆಸಿ, ಅವರ ಸೇವೆಯನ್ನು ಮೆಚ್ಚಿ ಮಂಜೂರು ಮಾಡಲು ಅಭಿಪ್ರಾಯ ಪಟ್ಟಿದ್ದ [50] ಎಕರೆ ಜಾಗವನ್ನು ಬಡವರ ಉದ್ಧಾರದ ದೃಷ್ಟಿಯಿಂದ ಸ್ವೀಕರಿಸದೇ ಇದ್ದು,

[15ನೇ ಪುಟ ನೋಡಿ]

ಜನರ ಹರ್ಷೋದ್ಗಾರದೊಡನೆ ಕಾವೇರಿನಾಡು ವಿದ್ಯಾಸಂಸ್ಥೆಯ ಉದ್ಘಾಟನೆ

ಬೆಂಗಳೂರಿನಲ್ಲಿ ಜರುಗಿದ ಅದ್ದೂರಿಯ ಕೈಲ್ ಮುಹೂರ್ತ ಮಹೋತ್ಸವ

ಪಟ್ಟಡ ಶಿವಕುಮಾರ್

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಮಹದೇವಪುರದಲ್ಲಿ ಶ್ರೀ ಅಮ್ಮಾಜೀರ ಪೊನ್ನಪ್ಪನವರ 'ಕಾವೇರಿನಾಡು ವಿದ್ಯಾಸಂಸ್ಥೆ'ಯನ್ನು ಕಿಕ್ಕಿರಿದು ನೆರೆದಿದ್ದ ಪ್ರೇಕ್ಷಕರ ಮುಗಿಲುಮುಟ್ಟುವ ಕರತಾಡನ, ಕಿವಿಗಡಚ್ಚಿಕ್ಕುವ ಪಟಾಕಿಗಳ ಆರ್ಭಟ, ಜನರ ಹರ್ಷೋದ್ಗಾರಗಳ ನಡುವೆ, ಮಡಿಕೇರಿ ಶಾಸಕ ದಂಬೆಕೋಡಿ ಮಾದಪ್ಪನವರು ಉದ್ಘಾಟಿಸಿದರು.

ಆಗಸ್ಟ್ 31ರಂದು ವ್ಯವಸ್ಥೆಗೊಂಡಿದ್ದ ಕಾವೇರಿನಾಡು ವಿದ್ಯಾಸಂಸ್ಥೆಯ ಉದ್ಘಾಟನೆ ಮತ್ತು ದ್ವಿತೀಯ ವರ್ಷದ ಕೈಲ್ ಮುಹೂರ್ತ ಸಮಾರಂಭದ, ಗಣ್ಯರ ಭರಿತ ವೇದಿಕೆಯಿಂದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಶಾಸಕರು, ಕೊಡಗಿನಲ್ಲಿ ಜನ ತಮ್ಮ ನೋವು, ಕಷ್ಟಗಳನ್ನು ಮರೆಯಲು ಕೈಲ್ ಮುಹೂರ್ತದಂತಹ ಉತ್ಸವಗಳನ್ನು ಆಚರಿಸಿದರೆ, ಇಲ್ಲಿ ಜನ ಸಂಘಟನೆಯೇ ಇಂತಹ ಸಮಾರಂಭಗಳ ಇರಾದೆಯಾಗಿದೆ ಎಂದು ನುಡಿದರು. ಕೊಡಗು ಮತ್ತು ದ. ಕನ್ನಡ ಜಿಲ್ಲಾ ಗೌಡ ಬಂಧುಗಳನ್ನು ಒಂದೆಡೆ ಸಮಾಗಮಗೊಳಿಸಿದ್ದಕ್ಕಾಗಿ ಅಮ್ಮಾಜೀರ ಪೊನ್ನಪ್ಪನವರನ್ನು ಮೆಚ್ಚಿಕೊಂಡರು. ಕಾಳೆಯಂಡ ಸೀತಮ್ಮನವರು ಮಾತನಾಡಿ ಅಮ್ಮಾಜೀರ ಪೊನ್ನಪ್ಪನವರ ಸಾಧನೆಯನ್ನು ಶ್ಲಾಘಿಸಿದರು.

ಸಮಾರಂಭಕ್ಕೆ ಅತಿಥಿಗಳನ್ನು ಅಮ್ಮಾಜೀರ ಪೊನ್ನಪ್ಪನವರು ಸ್ವಾಗತಿಸಿದರೆ ಕೆದಂಬಾಡಿ ಸವಿತಾ ಶಿವರಾಮೇಗೌಡ ಪ್ರಾರ್ಥಿಸಿದರು. ಕುಮಾರಿ ಚೆರಿಯಮನೆ ಧನು ಮತ್ತು ಮಾಡಾವು ಸಂಪಾಜೆಯವರು ಕಾರ್ಯಕ್ರಮ ನಿರೂಪಿಸಿದರೆ, ಕಲ್ಲುಮುಟ್ಲು ಬಸಪ್ಪನವರು ವಂದಿಸಿ ಸಮಾರಂಭಕ್ಕೆ ತೆರೆ ಎಳೆದರು.

ಇದಕ್ಕೂ ಮೊದಲು ನಡೆದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೋಳಿಬೈಲು ಲಹರಿ ವೆಂಕಟೇಶ್ ಎಂಬ ಏಳು ತಿಂಗಳ ಮಗು ಜ್ಯೋತಿ ಬೆಳಗಿಸಿ ಉದ್ಘಾಟಿಸಿತು. ಮಗು ಹೇಗೆ ಮುಂದೆ ಬೆಳೆಯುತ್ತಾ ಹೋಗುತ್ತದೋ ಹಾಗೆ ಕಾವೇರಿನಾಡು ಬೆಳೆಯುತ್ತಾ ಹೋಗಲಿ ಎಂದು ಸಭೆ ಹಾರೈಸಿತು. ತಿರೋಡಿ ಜ್ಯೋತಿ ಪ್ರಕಾಶ್‌ರವರು ಪ್ರಾರ್ಥಿಸಿದರು. 'ಜ್ಯೋತಿ ಬೆಳಗೋಣ, ಕಾವೇರಿ ನಾಡನ್ನು ಕಟ್ಟೋಣ" ಎಂಬ ಕುಮಾರಿ ದಿವ್ಯ ಮತ್ತು ಧೃತಿಯವರ ನೃತ್ಯ ಮತ್ತು ಯುವ ವೃಂದ ಸಾಂಪ್ರದಾಯಿಕ ಉಡುಪಿನೊಡನೆ, 'ಕಾವೇರಿನಾಡ ಕರುನಾಡ ಬೀಡಾ ಕೊಡಗಿನ ಕಲಿಗಳೇ, ಭಾರತದ ರಕ್ಷಣೆಯ ಕಲಿಗಳೇ ಸ್ವಾಗತಾ ಸುಸ್ವಾಗತಾ ಕನ್ನಡದಾ ಬಂಧುಗಳೇ' ಎಂಬ ಕಾವೇರಿನಾಡಿನ ವರ್ಣನಾಪೂರಿತ ನೃತ್ಯ ಸಮಾರಂಭದ ಜನರ ಮೈನವಿರೇಳಿಸಿತು. ಮಧ್ಯೆ ಮಧ್ಯೆ ಹೊರಟ ಗಾನಮಾಧುರ್ಯ ಮಿಮಿಕ್ರಿಗಳು ಜನರನ್ನು ರೋಮಾಂಚನಗೊಳಿಸಿದವು.

ಸಂಗಾತಿ ಕಣ್ಣಲ್ಲಿ ಕಾವೇರಿನಾಡು : ಕಾವೇರಿನಾಡಿನ ನೈಜ ಚಿತ್ರಣವನ್ನು ಕಣ್ಣಾರೆ ಕಾಣಲು "ಕೊಡಗು ಸಂಗಾತಿ" ಅಲ್ಲಿಗೆ ಭೇಟಿ ನೀಡಿದಾಗ, ನಗರದ ಗಲಿಬಿಲಿಯಿಂದ ದೂರ ಉಳಿದು, ನಿರ್ಮಲ ಪರಿಸರದ ಮಧ್ಯೆ ತಲೆಯೆತ್ತಿ ನಿಂತಿರುವ ವಿದ್ಯಾಸಂಸ್ಥೆ ಜನರ ಮನಸ್ಸನ್ನು ಆಕರ್ಷಿಸುತಿತ್ತು. ನೋಡಲು ಕಣ್ಣೆತ್ತುವಷ್ಟು ದೂರ ಬಯಲು ಪ್ರದೇಶ ಕಂಡು ಬಂದರೂ, ಅಲ್ಲಲ್ಲಿ ತಲೆಯೆತ್ತಿರುವ ಬಂಡೆಕಲ್ಲುಗಳು, ದೂರದಲ್ಲಿ ಕಾಣುತ್ತಿದ್ದ ಸಣ್ಣಸಣ್ಣ ಬೆಟ್ಟಗಳು, ಅಲ್ಲಿಂದ ತೇಲಿ ಬರುತ್ತಿದ್ದ ತಣ್ಣನೆಯ ಗಾಳಿ, ಕಣ್ಮನ ತಣಿಸುತ್ತಿತ್ತು. ಒಂಭತ್ತು ಎಕರೆಗಳಷ್ಟಿರುವ ಪ್ರದೇಶದಲ್ಲಿ ಈಗಾಗಲೇ 178 ಜನ ಸದಸ್ಯರು ಇಲ್ಲಿ ನಿವೇಶನಗಳನ್ನು ಹೊಂದಿದ್ದು, ಇನ್ನು ಕೆಲವೇ ಅವಧಿಯಲ್ಲಿ ಈ ಪ್ರದೇಶ "ಮಿನಿ ಕೊಡಗು" ಆಗಬಹುದು ಎಂಬ ಭಾವನೆ ಜನರ ಮನದಲ್ಲಿ ಮೂಡಿತ್ತು. ಸಾವಿರಾರು ಜನರಿಗೆ ಸರಿಹೊಂದುವಂತೆ ಸಮಾರಂಭವನ್ನು ಸಂಘಟಿಸಿ, ಸಮಾರಂಭಕ್ಕೆ ಜನರು ಬರಲು ಮತ್ತು ಹೋಗಲು ಬಸ್ಸಿನ ವ್ಯವಸ್ಥೆಯನ್ನು ಕಲ್ಪಿಸಿ, ಜನಮನ ಗೆದ್ದ 38ರ ಹರೆಯದ ಅಮ್ಮಾಜೀರ ಪೊನ್ನಪ್ಪನವರನ್ನು "ಇಡೀ ನಮ್ಮ ಸಂಘ ಸಂಸ್ಥೆಗಳು ಮಾಡದೇ ಇರುವ ಕಾರ್ಯವನ್ನು ಏಕವ್ಯಕ್ತಿ ಮಾಡಿ ತೋರಿಸುತ್ತಿದ್ದಾರೆ" ಎಂದು ಕೆಲವರು ಬಸ್ಸಿನಲ್ಲಿ ಹೊಗಳಿಕೊಂಡದ್ದು "ಸಂಗಾತಿ" ಕಿವಿಗೂ ಬಿದ್ದಿತು.

ನನ್ನವರು

ಇರುಳಲ್ಲಿ
ನನ್ನವ ಬಳಿ
ಇರುವಾಗ
ಇರದು ಚಳಿ !
"ಕೊಡಗು–ಸಂಗಾತಿ"
ಇರುವಾಗ
ನನ್ನವ ಬರುವರು
ನನ್ನ ಬಳಿ ॥

ಕಡ್ಲೆರ ನವಿತ ದಯಾನಂದ
ಬೆಂಗಳೂರು.

ಗೌಡರ ವಿವಾಹ ಪದ್ಧತಿ

[ಹಿಂದಿನ ಸಂಚಿಕೆಯಿಂದ]

ಆರತಿ ಮಾಡುವುದು ಮತ್ತು ದೃಷ್ಟಿ ತೆಗೆಯುವುದು

ಚಪ್ಪರದ ಮುಂಭಾಗಕ್ಕೆ ಬಂದಾಗ ಮುತ್ತೈದೆಯರು 5/7/9ರಂತೆ ಆರತಿ ಮಾಡುವರು. ಇಲ್ಲಿ ಮಧುವಣ್ಣನ/ಮಧು ವಳಿಗೆಯ ಕಾಲು ತೊಳೆಯುವ ಕ್ರಮ ವಿದೆ. ಮಧು ಮಕ್ಕಳ ಅಕ್ಕನ ಮಕ್ಕಳು ಇಲ್ಲವೇ ಹತ್ತಿರದ ಸಂಬಂಧಿಕರ ಸಣ್ಣ ಮಕ್ಕಳು ಮಧುವಣ್ಣನ ಕಾಲು ತೊಳೆಯು ವರು. ಕಾಲು ತೊಳೆದ ಸುಗುವಿನ ಚೆಂಬಿಗೆ ಅಡೋಳಿಯು ಹಣ ಹಾಕುವರು.

ಕೃಪೆ :

ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ

ಆರತಿ ಎತ್ತಿ ಹಿಂತಿರುಗುವಾಗ ಆರತಿ ತಟ್ಟೆಗೂ ವಧು ಯಾ ವರನ ಕಡೆಯವರು ಎಲೆ ಅಡಿಕೆ ಹಾಕುವರು. ಆರತಿ ಆದ ಕೂಡಲೇ ಊರು ಗೌಡರು/ಮುಖ್ಯಸ್ಥರು 4 ಎಲೆ 4 ಅಡಿಕೆ ಹಿಡಿದು ವರ/ವಧುವಿಗೆ ತಲೆಗೆ ಸುತ್ತ ತಂದು 4 ಎಲೆ 4 ಅಡಿಕೆ ಯನ್ನು 4 ದಿಕ್ಕುಗಳಿಗೆ ಎಸೆದು ಒಂದು ತೆಂಗಿನ ಕಾಯಿಯನ್ನು ತಲೆಗೆ ಸುತ್ತು ತಂದು ಕಲ್ಲಿಗೆ ಹೊಡೆದು ಚೂರು ಮಾಡು ತ್ತಾರೆ. ಇದು ಮಧು ಮಕ್ಕಳ ದೃಷ್ಟಿ ತೆಗೆಯುವ ಕ್ರಮ.

ಹಸೆ ಬರೆಯುವುದು :

ಸ್ನಾನ ಮಾಡುತ್ತಿರುವ ಸಮಯದಲ್ಲಿ ನೆರೆದ ಸಭಿಕರಿಗೆ ಊರು ಗೌಡರು/ಮುಖ್ಯ ಸ್ಥರು ನೀರು ಕೊಟ್ಟು ಹಸೆ ಬರೆಯುವುದಕ್ಕೆ ಕೇಳಿಕೊಳ್ಳುತ್ತಾರೆ. ನೆಲ್ಲಕ್ಕಿ ಅಡಿಯಲ್ಲಿ ಹುಡುಗಿಯ ಹಸೆಯು ಎಡಭಾಗದಲ್ಲಿ ಬರು ವಂತೆಯೂ ಹುಡುಗನ ಹಸೆಗೆ ಸೂರ್ಯ ಗುರುತು ಹಾಕಿ ಸ್ವಲ್ಪ ದೊಡ್ಡದಾಗಿಯೂ, ಚಂದ್ರನ ಗುರುತು ಹಾಕಿ ಸ್ವಲ್ಪ ಚಿಕ್ಕದಾಗಿ ಹುಡು ಗಿಯ ಹಸೆಯನ್ನು ಬರೆಯುವರು. ಹಸೆಗೆ ಹುಡುಗಿಯ ಮತ್ತು ಹುಡುಗನ ಹೆಸರು ಬರೆಯಬೇಕು. ಹಸೆ ಬರೆಯುವುದಕ್ಕೆ ಕಪ್ಪು ಗೋಡೆಯಾದರೆ ಸೀಮೆಸುಣ್ಣದಲ್ಲಿ ಬಿಳಿ ಗೋಡೆಯಾದರೆ ಬಣ್ಣದಸೀಮೆಸುಣ್ಣವನ್ನು ಉಪಯೋಗಿಸುತ್ತಾರೆ. ಹಸೆ ಬರೆದ ನಂತರ ಹಸೆ ಬರೆದವರಿಗೆ ಊರು ಗೌಡರು ಒಂದು ಪಚ್ಚೆಯಲ್ಲಿ ಹೊದುರಿ, ಬಾಳೆಹಣ್ಣು, ಅವಲಕ್ಕಿ, ಕಾಫಿಯನ್ನು ಫಲಹಾರಕ್ಕಾಗಿ ಕೊಡುವರು. ಅವರು ಅಲ್ಲಿಂದ ಸ್ಥಳ ಬಿಟ್ಟ ಕೂಡಲೇ ಊರ ಅಕ್ಕಂದಿರು 3 ಅಥವಾ 5 ಜನರು ಬಂದು ಶೋಭಾನೆ ಹಾಡು ಹೇಳಿ ಪ್ರತಿ ಹಸೆಗೂ 5 ಕುಡ್ತೆ ಅಕ್ಕಿ 5 ಎಲೆ ಅಡಿಕೆಯಂತೆ ಇಟ್ಟು ಒಲಿ ಚಾಪೆ ಹಿಡಿದು ಎಲ್ಲರಲ್ಲೂ ಕೇಳುತ್ತಾ ಹಸೆ ಚಾಪೆ ಹಾಕುವರು. ಅವರಿಗೂ ಊರು ಗೌಡರು ಲಘು ಉಪಹಾರವನ್ನು ಕೊಡು ವರು. ಕೂಡಲೇ ಒಂದು ಕಂಚಿನ ಗಿಂಡಿಗೆ ಹಸುವಿನ ಹಾಲು ಹಾಕಿ ಅದರ ಒಳ ಬದಿಯ ಸುತ್ತಲೂ 5 ಮಾವಿನ ಎಲೆ ಯನ್ನು ಇಟ್ಟು ಅದರ ಮಧ್ಯದಲ್ಲಿ ಕಂಚಿನ ಗಿಂಡಿಯ ಬಾಯಿಯಲ್ಲಿ ಸರಿಯಾಗಿ ಕುಳಿತು ಕೊಳ್ಳುವಂತೆ ಒಂದು ತೆಂಗಿನ ಕಾಯಿ ಯನ್ನು ಇಟ್ಟು ಗಿಂಡಿಯನ್ನು ಅಕ್ಕಿ ಇರುವ ಕಂಚಿನ ಬಟ್ಟಲಿನ ಮಧ್ಯದಲ್ಲಿ ಸರಿ ಯಾಗಿ ನಿಲ್ಲುವಂತೆ ಇಡುವುದು. ಗಿಂಡಿಯ ಎದುರು ಭಾಗದಲ್ಲಿ ಕಂಚಿಗೆ ಹಣತೆ ದೀಪ ಇಟ್ಟು ಸುತ್ತ ಕುಂಕುಮದ ಕರಡಿಗೆ ಸಣ್ಣ ಕನ್ನಡಿ, ಮರದ ಬಾಚಣಿಗೆ, ವಿಭೂತಿ ಉಂಡೆ ಮತ್ತು ಗಿಂಡಿಯ ಕಂಠಕ್ಕೆ ಕರಿ ಮಣಿಯನ್ನು ಸುತ್ತಿ ದೀವಿಗೆಯನ್ನು ಹಚ್ಚಿ ನೆಲ್ಲಕ್ಕಿ ಅಡಿಯಲ್ಲಿ ಇಡುವುದು. ಅಷ್ಟರಲ್ಲಿ ವರ/ವಧುವು ಆರತಿಯನ್ನು ಮುಗಿಸಿಕೊಂಡು ಹಸೆ ಬರೆದ ನೆಲ್ಲಕ್ಕಿ ಅಡಿಗೆ ಬರುವುದು.

ಹರಿಕೆ ಹಣ ಕಟ್ಟುವುದು :

ಗಂಗೆ ಪೂಜೆಯನ್ನು ಮುಗಿಸಿ ನೆಲ್ಲಕ್ಕಿ ಅಡಿಗೆ ಬಂದ ನಂತರ ಕುಲದೇವರಿಗೆ ಹರಿಕೆ ಹಣ ಕಟ್ಟುವುದು. ವರ/ವಧುವನ್ನು ಹಸೆಯ ಎದುರಿನಲ್ಲಿ ನಿಲ್ಲಿಸಿ, ಊರಗೌಡರು/ ಮುಖ್ಯಸ್ಥರು, ಕುಟುಂಬಸ್ಥರು, ನೆಂಟ ರಿಷ್ಟರನ್ನು ಹರಿಕೆ ಹಣ ಕಟ್ಟುವುದಕ್ಕೆ ಆಮಂತ್ರಿಸಿ, ಒಂದು ಸಣ್ಣ ಪಚ್ಚೆಯಲ್ಲಿ ಹೊದುರಿ, ಬಾಳೆಹಣ್ಣು, ಅವಲಕ್ಕಿ, ಬೆಲ್ಲ, ತೆಂಗಿನಕಾಯಿ, 2 ಓಟೆ ಗುತ್ತಿ, 2 ಕೋಲು ಮಾವಿನ ಎಲೆ, ಒಳ್ಳೆ ಮೆಣಸು, 25 ಪೈಸೆಯ ಒಂದು ನಾಣ್ಯ ಶೇಖರಿಸಿಟ್ಟು ಕೊಂಡು "ಹತ್ತು ಕುಟುಂಬ ಹದಿನೆಂಟು ಗೋತ್ರ ಕುಲಸ್ಥರ ಸಭೆಯಲ್ಲಿ ನೆಲ್ಲಕ್ಕಿ ಅಡಿ ಯಲ್ಲಿ ಕುಲ ದೇವರಿಗೆ ಹರಕೆ ಹಣ ಕಟ್ಟು ವಂತವೇ ಎಂದು ಮೂರು ಬಾರಿ ಕೂಗಿ ಹೇಳಿ ವರನ/ ವಧುವಿನ ಕೈಯಿಂದ ಒಂದು ಓಟೆ ಗುತ್ತಿಗೆ 25 ಪೈಸೆ ನಾಣ್ಯವನ್ನು ಇನ್ನೊಂದಕ್ಕೆ ಒಳ್ಳೆ ಮೆಣಸನ್ನು ತುಂಬಿ ಅದಕ್ಕೆ ಮಾವಿನ ಎಲೆಯಿಂದ ಮುಚ್ಚಿ ಕೋಲಿನಿಂದ ತುಂಬಿ ಜಡಿದು ತೆಂಗಿನ ಕಾಯಿಯನ್ನು ಒಡೆದು ನೀರು ಹಾಕಿ ಶುದ್ಧ ಮಾಡಿ ತೆಂಗಿನ ಒಡೆಗಳನ್ನು ಅಂಗಾಂತ ಇಟ್ಟು ಬಾಳೆಹಣ್ಣು ಗಂಧದ ದೂಪ ಕೊಟ್ಟು ಹರಿಕೆ ಹಣ ಕಟ್ಟಿದ ಓಟೆ ಗುತ್ತಿಗೆಯನ್ನು ಮನೆ ಯಜಮಾನರಲ್ಲಿ ಕೊಡುವರು. ಅವರು ಅದನ್ನು ಅಟ್ಟ ವಲ್ಲಿ ಮುಡಿಪು ಕಟ್ಟಿರುವ ಸ್ಥಳದಲ್ಲಿ ಇಟ್ಟು ಬರುವರು. ನಂತರ ವರನನ್ನು/ವಧು ವನ್ನು ಹಸೆ ಚಾಪೆಯಲ್ಲಿ "ಹತ್ತು ಕುಟುಂಬ ಹದಿನೆಂಟು ಗೋತ್ರ"ದ ಒಕ್ಕಣೆ ಹೇಳಿ ಕೂರಿಸುತ್ತಾರೆ. ಎದುರಿನಲ್ಲಿ ಒಂದು ಮಣೆಯ ಮೇಲೆ ಕಂಚುಮಿಯನ್ನು ಇಡುವರು.

[ಮುಂದುವರೆದಿದೆ]

ಇಳೆಗೆ ಬರಲು ಮಳೆ

ಬಂದಿತದೊ ಮಳೆ ಓಡಿ । ಜಗವತಣ್ಣನಾಡಿ ।
ತಣ್ಣನೆಯ ತಂಪನಿಯು । ಬೀಳುತಿದೆ ಇಳೆಗೆ ॥
ಹಳ್ಳಿ ರೈತರು ಎಲ್ಲ ಹಾ... । ಎಂದು ಕೈ ಮುಗಿದು
ನಮಿಸುವರು ಗಘನದಿಂ । ಬೀಳುತಿಹ ಮಳೆಗೆ ॥

ತುರು ಕರುಗಳೆಲ್ಲವವು ಓಡೋಡಿ ಬರುತಿಹವು
ಕರೆದು ಅಂಬಾ ಎಂದು ಕೊಟ್ಟಿಗೆಯ ಕಡೆಗೆ ।
ಹಳ್ಳಿಯರು ವಿಧ ವಿಧದ ಗೊರಬೆಗಳ ತಲೆಗಿರಿಸಿ
ಊಳುವರು ಸಹನದಲಿ ಬೀಳುತಿಹ ಮಳೆಗೆ ॥

ಕಾ...ಎಂದು ಕಾಗೆಗಳು ಕೂಗುತಲಿ ಹಾರುವುವು
ಆಗಸದ ಮಾರ್ಗದಲಿ ಸಾಲಾಗಿ ಜತೆಗೆ ।
ಹಕ್ಕಿಗಳು ಗಾನವನು ಹಾಡುತಲಿ ಹಾರಾಡಿ
ಆತುರದಿ ಬರುತಿಹವು ಗೂಡಿನಾಕಡೆಗೆ ॥

ತೋಡಿನಲಿ ಕೊಕ್ಕರೆಯು ತಪಿಸುತಲಿ ಮೀನುಗಳ
ನಿಲ್ಲುವುದು ಕೆತ್ತಿರುವ ಪ್ರತಿಮೆಯ ಹಾಗೆ ।
ಏನು ಅರಿಯದ ಮೀನು ಕಪ್ಪೆಗಳ ಕಡಿಯುತಲಿ
ಇಳಿಸುವುದು ಒಂದೊಂದೆ ಗಂಟಲಿನ ಒಳಗೆ ॥

ಬಾಡಿ ಒಣಗಿದ ಹುಲ್ಲು ಗುಡ್ಡದಲಿ ಮೇಲೆದ್ದು
ನಿಲ್ಲುವುದು ಹಸಿರೆಲೆಯು ಹಾಸಿದಂತೆ
ಹಸಿದ ಪಶುಗಳಿಗೆಲ್ಲ ಹಸುವೆಯನು ನೀಗಲು
ಹಸಿಯ ಹುಲ್ಲದು ಇರಲು ಏನಿಲ್ಲ ಚಿಂತೆ ॥

ಮಳೆ ಗಾಳಿ ಬಂದೊಡನೆ ಮಾವೆಲ್ಲ ಬೀಳುವುದು
ಒಣಗಿದೆಲೆ ಕಾಡಿನಲಿ ಹರಡಿ ಇರುವಂತೆ ।
ಗೇರು ಹಣ್ಣುಗಳೆಲ್ಲ ಅಲುಗಿ ಬೀಳುವ ನಾದ
ಮೇಳದಲಿ ಬಡಿಯುತಿಹ ಡೋಲಿನಂತೆ ॥

ಮಳೆ ಬಿದ್ದು ನೀರೆಲ್ಲ ಹೊಳೆಯಾಗಿ ಹರಿದೊಡನೆ
ಮೀನುಗಳು ನೀರಿನಲಿ ಮೇಲೇರುವಂತೆ ।
ಗೇರು ಬೀಜವು ಮೊಳೆತು ಕಾಣುತಿಹ ತಿರುಳೆಲ್ಲ
ನಾಗ ಬಿಚ್ಚಿದ ಹೆಡೆಯ ರೂಪದಂತೆ ॥

ಸೊಳ್ಳೆಗಳು ಹಾಡುತಿಹ ಗಾನವದು ಕಿವಿಗೆಲ್ಲ
ಕೇಳುವುದು ಕಂಪಿಸುವ ವೀಣೆಯಂತೆ ।
ಕಪ್ಪೆಗಳು ಕರೆಯುವುವು ಬಾ ಎಂದು ಮಳೆಯನ್ನು
ಬಾರಿಸಲು ಧ್ವನಿ ಬರುವ ಮೃದಂಗದಂತೆ ॥

ಚಿತ್ರವದು ಕಾಣುವುದು ಕಾಮನಾ ಬಿಲ್ಲಿನದು
ತಾರೆಯರು ತಲೆಗಿಟ್ಟ ಹೂಮಾಲೆಯಂತೆ ।
ಅರುಣನವ ಮಿಣುಕುವನು ಬಾನದಲಿ ಕೆಲವೊಮ್ಮೆ
ತರುಣಿಯರು ತೊಟ್ಟಿರುವ ಮೂಗ್‌ಬೊಟ್ಟನಂತೆ ॥

ಮಳೆರಾಯ ಬಂದೊಡನೆ ಜಗವೆಲ್ಲ ಕಾಣುವುದು
ಧರೆಗೆ ಹೊದಿಸಿದ ಹಸಿರು ಸೀರೆಯಂತೆ ।
ಮಳೆ ಬಿದ್ದು ಫಸಲೆದ್ದು ಮೇಲೇರಿ ಬರುತಲಿರೆ
ಬರಗಾಲ ಬಾರದೀ ಭಾರತದ ಜನಕೆ ॥

● **ಹೊದ್ದೆಟ್ಟಿ ಭವಾನಿಶಂಕರ್,** ಬೆಂಗಳೂರು.

[12ನೇ ಪುಟದಿಂದ ಮುಂದುವರೆದುದು]

ತಾರೀಖು 4-5-1964ರಂದು ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರು.

ಇವರು ಕೊಡಗಿನ ಗೌಡ ಜನಾಂಗಕ್ಕೆ ಸೇರಿದವರಿದ್ದು, ಮಡಿಕೇರಿಗೆ ಸಮೀಪದ ಬಿಳಿಗೇರಿ ಗ್ರಾಮದ ಪೂಜಾರಿಮನೆ ಸಣ್ಣಯ್ಯಗೌಡರ ಮೂರನೆಯ ಪುತ್ರ. ಇವರಿಗೆ ಜನ್ಮ ಕೊಟ್ಟ ತಾಯಿ ಶ್ರೀಮತಿ ಕಾವೇರಿಯಮ್ಮನವರು ಆರು ಜನ ಗಂಡು ಮಕ್ಕಳಲ್ಲಿ ಇವರು 3ನೇಯವರು. ಹಿರಿಯವ ಮಂದಣ್ಣ ಬೊಂಬಾಯಿಯಲ್ಲಿ,2ನೇಯವ ಮತ್ತೂರಿನಲ್ಲಿ ಕೃಷಿಕ ನಾಲ್ಕನೇಯವ ಅಕಾಲ ಮರಣ. 5ನೇ ಪೊನ್ನಪ್ಪ ಮೇಕೇರಿ ಯಲ್ಲಿ ನುರಿತ ಕೃಷಿಕ. ನಂತರ ಕಡೆಯವರು IAFನಲ್ಲಿ Warrant Officer ಆಗಿ ಸ್ವ ನಿವೃತ್ತಿಯಾಗಿ, ಬೆಂಗಳೂರಿನ ತಮ್ಮ Somaiah ಫಾರಂನಲ್ಲಿರುವಾಗಲೇ ಮರಣ ಹೊಂದಿದರು. ಇವರ ಪತ್ನಿ ಮೂಟೇರ ಕುಟ್ಟಪ್ಪನವರ ಪುತ್ರಿ.

ಇಂತಹ ವೀರಪುರುಷನ ಹೆಸರು ಇತಿಹಾಸದಲ್ಲಿ ಎಲ್ಲೂ ಕಾಣಬರದಿರುವುದು ಶೋಚನೀಯ ಸಂಗತಿಯಾಗಿದೆ.

ಅಲ್ಲದೆ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ, ತನು ಮನ ಧನ ವನ್ನು ಅರ್ಪಿಸಿ ಸೇವೆ ಗೈದು ಕೊಡಗಿನ ಗಾಂಧಿ ಎಂದು ಖ್ಯಾತಿ ಗಳಿಸಿದ್ದ ಸರ್ವತ್ಯಾಗಿಗಳಾದ ಪಂದ್ಯಂಡ ಬೆಳ್ಯಪ್ಪನವರು, ಕೊಡಗಿನ ರಾಜಕೀಯದ ಸೂತ್ರ ಚಾಲಕರೆಂದು ಖ್ಯಾತಿ ಪಡೆದಿದ್ದ ದಿ|| ಸಿ. ಎನ್. ವೆಂಕಪ್ಪಯ್ಯನವರು, ನಿರ್ಭೀತ ರಾಜ ಕಾರಣಿ ಖ್ಯಾತ ವಾಕ್ಪಟು, ಪಾರ್ವಂಗಡ ಕುಶಾಲಪ್ಪ ಮೊದ ಲಾದ ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತು ಕೊಡಗಿನ ಹಿರಿಯ, ಆದರ್ಶ ಕವಿಗಳಾದ ಬಿ.ಡಿ. ಗಣಪತಿಯವರು ತಮ್ಮ ಕೃತಿಯಲ್ಲಿ ಬರೆದು ಹೊಗಳಿದ್ದಾರೆ.

"ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರ ಕಥೆ" ಎಂಬ ಪುಸ್ತಕದಲ್ಲಿ ಈ ವಿಚಾರ ಅಡಕವಾಗಿವೆ.

ಸಂಗ್ರಹ : **ಮೇಡ್ತನ ಜ್ಯೋತಿ ಶಿವಾಜಿ**
ಪಿರಿಯಾಪಟ್ಟಣ

ನಿಮ್ಮ ಪತ್ರಗಳು

ಚಿರಂಜೀವಿಯಾಗಲಿ

ಮಾನ್ಯರೆ,

ನಮ್ಮ ಅರೆಭಾಷೆಯನ್ನು ನಮ್ಮ ಗೌಡ ಸಂಸ್ಕೃತಿ ಹಾಗೂ ನಮ್ಮ ಗೌಡ ಜನಾಂಗವನ್ನು ನಾನಾ ಕಡೆ ಪಸರಿಸಲು ಇದೀಗ ತಾನೇ "ಕೊಡಗು ಸಂಗಾತಿ"ಯು ಮೊಳಕೆ ಒಡೆದಿದೆ. ಇದು ಹೆಮ್ಮರವಾಗಿ ಬೆಳೆದು ಎಲ್ಲರ ಮನವೊಲಿಸಿ ಅನೇಕ ಅಭಿಮಾನಿಗಳಿಂದ ಮೆಚ್ಚುಗೆಗೆ ಪಾತ್ರವಾಗಿ, ಸದಾ "ಚಿರಂಜೀವಿ"ಯಾಗಿ ಎಲ್ಲರ ಮನೆಯನ್ನು ಬೆಳಗಲಿ ಎಂದು ಹಾರೈಸುತ್ತೇನೆ.

● **ಮುದ್ದೀನ ಯು. ಪ್ರವೀಣ್‌ಕುಮಾರ್**
ಮದೆನಾಡು.

ಮೆಚ್ಚುಗೆ

ಮಾನ್ಯರೆ,

ನಮ್ಮ ಅರೆಭಾಷೆಲಿ "ಕೊಡಗು ಸಂಗಾತಿ" ಎಂಬ ಪತ್ರಿಕೆ ಪ್ರಚಾರ ಮಾಡಿದ್ದನ್ನ ಓದಿ ತುಂಬಾ ಖುಷಿ ಆತ್. ನಾವು ಸಿಟಿಗೆ ಬಂದ್ ನಮ್ಮ ಭಾಷೆನ ನಾವು ಮರ್‌ತ್‌ಬುಟ್ಟಿದ್ದೊ. ನಮ್ಮ ಅರೆ ಭಾಷೆನ ಉಳಿಸಿ, ಬೆಳೆಸಿ, ಪೋಷಿಸಿ, ಪ್ರಚಾರ ಮಾಡಿದ್ದಕ್ಕೆ ನಮ್ಮ ಅಭಿನಂದನೆಗಳನ್ನು ವ್ಯಕ್ತಪಡಿಸುವೆ. ಮತ್ತೆ ಇನ್ನು ಹೆಚ್ಚು ಹೆಚ್ಚು ವಿಷಯುಗಳು ನಮ್ಮ ಭಾಷೆಲಿ ಸಂಗ್ರಹವಾಗಲಿ ಎಂದು ನಾನು ಶುಭ ಹಾರೈಸುವೆ.

● **ಕೊಂಪುಳೀರ ಬೇಬಿ ಮುತ್ತಪ್ಪ**
ಬೆಂಗಳೂರು.

ತೀರವ ಸೇರಲಿ

ಮಾನ್ಯರೆ,

"ಕೊಡಗು ಸಂಗಾತಿ" ಪತ್ರಿಕೇನ ನಾನ್ ಈಗೀಗ್ ಓದ್‌ತ್ತಾ ಒಳೆ. ನಮ್ಮ ಬಾಸೆಲಿ ಒಂದ್ ಪತ್ರಿಕೆ ಸುರು ಆಗಿಟೊಂತ ನಮ್ಮ ಜನಾಂಗಕ್ಕೆ ಗೊತ್ತಾದ ಮೇಲೆ ಎಲ್ಲವು "ಕೊಡಗು ಸಂಗಾತಿ" ಪುಸ್ತಕನ ತಗಂಡ್ ಓದೋಕೊಂತ ಈ ಎಲ್ಲಾ ನಮ್ಮ ಗೌಡ ಜನಾಂಗಕ್ಕೆ ತಿಳಿಸಿಕಂಡ್, ಹಂಗೇನೇ ನಿಮ್ಮ ಯಶಸ್ಸಿನ ಹಾದಿಗೆ ಹೃದಯ ತುಂಬಿ ಹಾರೈಸಿನೆ.

● **ಕೇರ್ಪಳ ಜಯಂತಿ ಡಿ.**, ಸುಳ್ಯ

ದಾರಿ ದೀಪವಾಗಲಿ

ಮಾನ್ಯರೆ,

"ನೀವು ಕಳ್ಸಿ ಕೊಡ್ತಾ ಇರುವ "ಕೊಡಗು ಸಂಗಾತಿ" ನಮ್ಮ ಕೈ ಸೇರ್ತಾ ಉಟ್ಟು ಅದರ ನೋಡಿ ತುಂಬಾ ಖುಷಿಯಾತ್. ಇದ್ ಹೀಂಗೆ ಇನ್ ಜಾಸ್ತಿಯಾಗಿ ಮುಂದುವರ್ದ್ ನಮ್ಮ ಯುವ ಜನಾಂಗದ ಏಳಿಗೆಗೆ ದಾರಿ ದೀಪವಾಗಲಿಂತೇಳಿ ಹಾರೈಸಿನೆ.

● **ಮುಂಞಣ್ಣನ ಎಲ್. ಸೋನಿ**, ಕಾಲೂರು.

ಸಂಗಾತಿ

ಮಾನ್ಯರೆ,

ಮಗುವಿಗೆ ಬೇಕು ತಾಯಿ ಸಂಗಾತಿ
ಮಾನವನಿಗೆ ಬೇಕು ಬಾಳ ಸಂಗಾತಿ
ನಮಗೆ ಬೇಕು "ಕೊಡಗು ಸಂಗಾತಿ."

ಹೀಗೆ ಈ ಪತ್ರಿಕೆ ಹೆಚ್ಚು ಹೆಚ್ಚು ಪ್ರಸಾರವಾಗಲಿ ಎಂದು ಹಾರೈಸುವ.

● **ಕಡ್ಲೇರ ಯಶೋಧ್‌ಕುಮಾರ್**
ಬೆಂಗಳೂರು.

ತುಂಬಾ ಚೆನ್ನಾಗಿದೆ

ಮಾನ್ಯರೆ,

ನೀವು ಕಳುಹಿಸುವ "ಕೊಡಗು ಸಂಗಾತಿ" ಬಹಳ ಚೆನ್ನಾಗಿ ಮೂಡಿ ಬರುತ್ತಿದೆ. ಓದಿ ತುಂಬಾ ಸಂತೋಷವಾಯಿತು. ಅದರಲ್ಲಿ ಬರುತ್ತಿರುವ ನಗೆಹನಿಗಳು ಬಹಳ ಚೆನ್ನಾಗಿ ಬರುತ್ತಿವೆ. ಓದುವುದಕ್ಕೆ ತುಂಬಾ ಸಂತೋಷ ಆಗುತ್ತದೆ. ಇಂತ ನಗೆಹನಿಗಳನ್ನು ಇನ್ನೂ ಹೆಚ್ಚು ಪ್ರಸಾರ ಮಾಡಿ.

● **ಕೊಂಬಾರನ ಗಣೇಶ್**, ಮೇಕೇರಿ.

ಅಭಿನಂದನೆ

ಮಾನ್ಯರೆ,

"ಹನಿ ಹನಿಯಾಗಿ ಬಂದ "ಕೊಡಗು ಸಂಗಾತಿ"
ಹೊಳೆ ಹೊಳೆಯಾಗಿ ಹರಿಯಲಿ"
ಎಂದು ಹಾರೈಸುವ.

● **ನಡುಮನೆ ಶೈಲ ಚಂಗಪ್ಪ**, ಮೈಸೂರು.

ಚಾಮೆವ್ವನಕ್ಕಲೆ ನಾಕ್ ಮಾತ್

ಅರೆ ಭಾಷಿಕ ವಿಭಾಗ

ಬಿ. ಆರ್. ಜೋಯಪ್ಪ, ಮಡೆ

ಹಿರಿಯರಕ್ಕಲೆ ಮಾತಾಡ್ದು, ಅವ್ರ ಅನುಭವನ ಕೇಳ್ದಿಲ್ಲಾ ಒಂಥರಾ ಖುಷೀ ಆದೆ. ಒಂದಿನ ಅವರೊಟ್ಟಿಗೆ ಮಾತಾಡಿರ್ಲೆ ಒಂದು ಕಾದಂಬರಿ ಓದಿದಂಗಾದೆ. ಹಿಂಗೆ ಗ್ಯಾನ ಮಾಡ್ದನಾನ್ ಯಾವ ಹಿರಿಯುರೊಟ್ಟಿಗೆ ಮಾತಾಡ್ದಪ್ಪಾಂತ ಹಂಗೇ ಕುದ್ದಿದ್ದೆ. ಆಗ ನಮ್ಮ ಚಾಮೆವ್ವನ ಗ್ಯಾನಾತ್. ಚಾಮೆವ್ವನಲ್ಲಿ ಕರೀ ಕಾಫಿ ಕುಡಿಯದೆ ತುಂಬಾ ದಿನಾಗಿತ್. ಹೆಂಗೂ ಮಳೆ ಬೇರೆ. ಹೋಗಿ ಬಿಸಿ ಬಿಸಿ ಕಾಫಿ ಕುಡ್ಪ್ ನಾಕ್ ಲಾಯ್ಕ ಪಟ್ಟಾಂಗ ಹೊಡಿಯವೋಂತ ಹೋದೆ. ಅವರ ಮನೆನೋ ತುಂಬಾ ದೂರ ಬೇರೆ. ಯಾರ್ಯಾರ್ದೋ ಗದ್ದೆದಾಟಕು. ಆ ಗದ್ದೆ ಪುಣಿಯೋ ಮಂಡಿಗಂಟ ಹೂಣ್‌ದೆ. ಹೆಂಗೋ ಕಾಲ್ ಎಳ್‌ಕಂಡ್ ಮುಂದೆ ಹೋದರೆ ಯಾಲ ತೋಟದೊಳಗೇ ಹೋಕು. ಆ ದಾರಿಯೋ ಬರೀ ಉಂಬುಳುಗಳ ಸಾಮ್ರಾಜ್ಯ! ಅಲ್ಲಿಂದ ಮುಂದೆ ಸುಮಾರ್ ಹದ್ನಾಕ್ ಕಡ್ಕಲ್‌ಗಳ ದಾಟೋಕು. ಮಂಟೆ ಹತ್ತಿ ಇಳ್ಪ್ ತೋಡು ದಾಟಿ ಹಟ್ಟಿಕರೇಲಿ ಹೋದರೆ ಆಚೆ ಕರೆ ಬೆಟ್ಟದ ಬುಡಾಲಿ ಕಾಂಬೊದೇ ಚಾಮೆವ್ವನ ಮನೆ. ಈ ದಾರಿದ್ ದೂರ ಗ್ಯಾನ ಮಾಡಿರೆ ಕುದ್ದಲ್ಲೆ ಜರ ಬಾದು. ನಾನ್ ಉಷ್ ಅಪ್ಪಾಂತ ಬುಸ್‌ಗುಟ್ಟಿಕಂಡ್ ಅವರ ಮನೆ ಅಂಗಳಲಿ ನಿತ್ತೆ. ನಾಯಿ ನನ್ನ ಕಂಡ್ ಬುಕ್ ಬುಕ್ ಬೌವ್‌ವೋತ್‌ಂತ ಬೊಗಳಿಕಂಡ್ ಹೆದ್ರಿ ಮನೆ ಬುಟ್ ಗದ್ದೆ ಕಡೆ ಓಡಿ ಹೋತು.

ನಾಯಿ ಬೊಗುಳುದು ಕೇಳಿ ಮನೆಯವ್ರು ಒಳಗಿಂದ ತಲೆ ಮಾತ್ರ ಹೊರಗೆ ಹಾಕಿ ನೋಡ್ದೊ. ಹಾಳ್ ಸಳಿ ಬೇರೆ. ಮನೆಯವ್ರು ಹಸ್ನಕ್ಕಿ ಹೊರೀತಿದ್ದೋ ಏನೋ? ಬಾಯಿ ನೊಣಚಿಕಂಡೇ ಬಂಧವ್ ನನ್ನ ಕಂಡ್ ದೆಯ್ಯಬುಟ್ಟವರಂಗೆ ನೆಟ್ಟಂಗಾದೊ. ಓ ಬನ್ನಿ ಬನ್ನಿಂತ ಕರ್ದೊ. ನಾನ್ ಮನೆಗೆ ಹತ್ತಿ ಕುದ್‌ಕಂಡೆ. ಅಷ್ಟೊತ್ತಿಗೆ ನೀರ್‌ಗೀರ್ ಬಾತ್. ಕಾಲ್ ಕೈ ಹಿಡ್ದಾತ್. ಸೌಖ್ಯಾಂತೆಲ್ಲಾ ಕೇಳ್ದೊ.

ನಂಗೆ ಚಾಮೆವ್ವನ ಕಾಂಬ ಆತುರ. ಚಾಂಪ ಆ ಮನೇಲಿಲ್ಲೆ. ದೊಡ್ಡ ಮಂಜ ನೊಟ್ಟಿಗೆ ಬೆಂಗ್ಳೂರ್ಲಿ ಇರುದುಂತ ನಂಗೆ ಗೊತ್ತಿತ್. ಅದ್ಕೆ ಚಾಮೆವ್ವ ಎಲ್ಲಿತ ಆ ಮನೆ ಸೊಸೆನ ಕೇಳ್ದೆ. "ಬಿದ್‌ಕಂಡುಟ್ಟುಂ"ತ ಸೊಸೆ ಹೇಳ್ತ್. "ಓಹೋ ಅತ್ತೆಗೂ ಸೊಸೆಗೂ ಯುದ್ಧ ಆಗುಟುಂತ" ನನ್ನ ಪಂಚಾಂಗ ಹೇಳ್ತ್. ಅಷ್ಟೊತ್ತಿಗೆ ಚಾಮೆವ್ವನೇ ಬಗ್ಗಿಕಂಡ್, ದೊಣ್ಣೆ ಕುತ್ತಿಕಂಡ್, ಬಂದ್ "ಯಾರ್ ನಂಗೆ ಗೊತ್ತಾತ್‌ಲಾಂತ" ಕೇಳ್ತ್. ಆಗ ನಾನ್ ಹಿಂಗೆ ಹಿಂಗೆಂತೆಲ್ಲಾ ನನ್ನ ಪರಿಚಯ ಹೇಳಿಕಂಡೆ. ಓ ಬಾಳಾ ದಿನಾತ್ ನಿನ್ನ ನೋಡದೆ. ಹೆಂಗೊಳಾ? ಚಾಕರಿಲಿ ಒಳಾಂತೆಲ್ಲಾ ಕೇಳ್ತ್.

ನೀವ್ ಹೆಂಗೊಳರಿ ಚಾಮೆವ್ವಾಂತ ನಾನ್ ಕೇಳ್ದೆ.

"ಅಯ್ಯೋ ಕಣ್ಣೂ ಕಾಂಬೊದುಲ್ಲೆ, ಕಿವಿನೂ ಕೇಳುದುಲೆ. ಊರು ಹೋಗೂಂತ ಹೇಳ್ತಾ ಉಟ್ಟು. ಕಾಡ್ ಬಾಂತ ಹೇಳ್ತಾ ಉಟ್ಟು. ಒಮ್ಮೆ ಕಣ್ಣ್ ಮುಚ್ಚಿದ್ದರೆ ಸಾಕಾಗಿತ್. ಯಾವ ಸುಖಕ್ಕೆಂತ ನಾ ಇನ್ನೂ ಒಳದೋ. ಹರಶಿವಾಂತ ಹೇಳಿರೂ ನಿದ್ದೆ ಬಾದುಲೆ. ಊಟನೂ ಸೇರುದುಲೆ. ಹಾಳ್ ಸೊಂಟ ಬೇರೆ ಬ್ಯಾನೆ. ಚಾಂಪ ಬೇರೆ ಬೆಂಗ್ಳೂರ್‌ಗೆ ಹೋಗಿ ಈ ಕೈಲ್ ಪೋದ್ ಬಂದರೆ ವರ್ಷ ಎರಡಾತ್. ರಾತ್ರಿ ಹಗಲೂ ಆಗಾಗ 'ಹೊರಗೆ' ಹೋಕು. ಈ ವಯಸ್‌ಲಿ ಆಗಾಗ 'ಹೊರಗೆ' ಹೋದು ಕಷ್ಟ ಆದೆ. ಎಲ್ಲಕ್ಕೂ ತೋಟದ ಕಡೆಗೇ ಹೋಕು. ಈ ಮನೆ ಸೋಂಬೇರಿಗಳಿಗೆ ಹೇಳ್ದೆ "ಮನೇಲೇ ಒಂದು ಕಕ್ಕಸ್ ಮನೆ ಕಟ್ಟಿಕಣೀಂತ." "ಥೂ, ಮನೆಯೊಳಗೆ ಹೇಸಿಗೆ ಮಾಡಿಕಂಡಿವೆಯಾಂತ" ಹೇಳಿವೆ. ಇವುಕೆ ಒತ್ತಿಕಂಡ್ ಬಾಕನ ತಿಂಬೊದುನ ಬುಟ್ ತೋಡ್ ಕಡೆ ಓಡಿವೆ. ಅಲ್ಲಿ ಕಲ್ಲ್ ಮೇಲೆ ಕುದ್ದ್ ಬಂದವೆ. ಹರಿವ ನೀರಿಗೆ ಕಟ್ ಇಲ್ಲೆಂತ ನೀರ್‌ನೆಲ್ಲಾ ಗಲೀಜ್ ಮಾಡುವೆ. ಯಾರ್ ಹೇಳ್ದು ಇವುಕೆ? ಬಚ್ಚಲ್ ಮನೆ ಉಟ್ಟಾ? ಅದೂ ಇಲ್ಲೆ. ತೋಡು ಕರೇಲಿ ನೀರ್ ಕಾಸಿಕೊಂಬೊದು ಕತ್ತಲಾದ ಮೇಲೆ ಮೀಯೊದು. ಮಳೆಗಾಲಲಿ ಇಲ್ಲೆ ಜಗಲಿ ಮೇಲೆ ನಿತ್‌ಕಂಡ್ ನೀರ್ ಹೊಯ್ಕಂಡೊ. ಅಯ್ಯೋ ಅಣ್ಣಾ ಹೇಳಿಕೆ ಹೋದರೆ ದಿನಬೆಳಗಾದು. ನಾನೆಲ್ಲಾ ಮಾಡ್ತಾ ಇದ್ದ ರೊಟ್ಟಿ ಆನೆ ಮೆಟ್ಟಷ್ಟಗಲ ಈಗ? ಎಂಥದೋ ಅಂಟೆಸಿಕಂಡವೆ. ಮುಖ ತೊಳೆಕನ ಅದರ್ನ ಕಿತ್ತ್ ಮಡಿಕೆಗೋ, ಗೋಡೆಗೋ, ಕನ್ನಡಿಗೋ ಅಂಟೆಸಿಟ್ಟವೆ. ಮತ್ತೆ ಪುನಃ ಅದರ್ನೇ ತೆಗ್ದವೆ, ಹಣೆಗೆ ಅಂಟೆಸಿಕಂಡವೆ. ಕೈಗೆ ಬಳೆ ಉಟ್ಟಾ? ಒಂದ್‌ಕೈಗೆ ವಾಚಿ. ಇನ್ನೊಂದ್ ಕೈಗೊಂದೋ ಎರಡೋ ಇರ್ತಾ ಇತ್ತ್. ಈಗ? ಅಂಗೈ ಅಗಲ. ಅದ್ ಮಿಸ್‌ನ್ ರೊಟ್ಟಿ ಬೇರೆ. ಹತ್ ರೊಟ್ಟಿ ತಿಂದರೂ ಹೊಟ್ಟೆ ತುಂಬಿಕಿಲ್ಲೆ, ಎಲ್ಲಾ ಶೋಕಿ ಆಗೋಗುಟು. ಹಣೆಗೆ ಕುಂಕುಮ ಹಾ ಕ್ತಾ ಇದ್ದೋ

ಈಗ ? ಎಂಥನೋ ಅಂಟಿಸಿಕಂಡವೆ. ಮೊಖ ತೊಳೆಕನ ಅದರ್ನ ಕಿತ್ತ್ ಮಡಿಗೋ, ಗೋಡೆಗೋ, ಕನ್ನಡಿಗೋ ಅಂಟಿಸಿಟ್ಟವೆ. ಮತ್ತೆ ಪುನಃ ಅದರ್ನೇ ತೆಗ್ದವೆ, ಹಣೆಗೆ ಅಂಟಿಸಿಕಂಡವೆ. ಕೈಗೆ ಬಳೆ ಉಟ್ಟಾ ? ಒಂದ್‌ಕೈಗೆ ವಾಚಿ. ಇನ್ನೊಂದ್ ಕೈಗೊಂದೋ ಎರಡೋ ಬಳೆಗ. ನನ್ನ ಈ ಮಾತ್ ಕೇಳಿರೆ ಈಗನವು "ಆ ಮುದಿಗೇನು ಗೊತ್ತು" ಅಂತ ಬಯ್ಯುವೊ. ಬಯ್ಯಲಿ, ನಾನೇನು ಇಲ್ಲದ್ ಹೇಳ್ತ್‌ಲೆಲ್ಲಾ.

ನಾ ನನ್ನ ಎಲ್ಲಾ ಮಕ್ಕಳಿಗೆ ಎದೆಹಾಲ್ ಪೊರ್ಲುಲಿ ಕುಡ್ಸಿಯೊಳೆ. ನನ್ನ ಹಿರಿ ಮಜ ಇಸ್ಕೂಲ್‌ಂದ ಬಂದ್‌ಸಾನ ಎದೆ ಹಾಲ್ ಕುಡೀತಿತ್. ಕಾಯ್ಲೊಂತೇಳಿ ಆ ಹೈದಂಗೆ ಬಾತ್‌ಲೆ. ಈಗ ನೋಡಿ. ಕೂಸ್ ನೆಗಾಡಿಕೆ ಶುರು ಮಾಡ್ತಾ ಇಲ್ಲೆಯೋ ಹೊತ್‌ಕಂಡ್ ಹೋಗಿ ತೌರ್‌ಲೋ, ಇನ್ನೆಲ್ಲೋ ಕೂಸ್‌ನ ಹಾಲ್ ಮರ್ಸಿಕೇಂತ ಬುಟ್‌ಬುಟ್ಟವೆ. ಆ ಕೂಸು ಪಾಪ ! ಗ್ಯಾನ ಮಾಡಿ ಗ್ಯಾನ ಮಾಡಿ ಮರ್ಸ್ಟ ಮರ್ಸ್ಟ ಲಾಚಾರಾದೆ. ಇತ್ತ ಅಯ್ಯೆ ಎದೆ ಬೇನೆ ಎದೆ ಬೇನೇಂತ ಓಡಾಡ್‌ದೆ. ಇವ್ರ ಒಂದೊಂದ್ ಆಟ ನೋಡಿರೆ ನಗೆ ಬಂದದೆ. ಈಗನ ಜನಗ ಯಾಕಾದವೆ ಹೇಳಿ? ಹೆಣ್ಣ್ ಅಕ್ಕಿ ಕಡೆಕನ ಗಂಡ ಗಾಳಿ ಹಾಕೋಕು. ಗಂಡ ನಾಟಿ ನೆಟ್ ಬಂದರೆ ಅವನ ಸೊಂಟಕ್ಕೆ ಹೆಣ್ಣ್ ರಾಗಿಕಲ್‌ನ ಇಸೊಕು. ಈ ಸೊಸೆ ತುಂಬಾ ಸೋಚಿ. ಗೋಣಿಕೊಪ್ಪಲಿ ಮಳೆ ಬಂದರೆ ಬೆಟ್ಟತ್ತೂರ್‌ಲಿ ನೆಗಡಿ ! ಪೊನ್ನಂಪೇಟೆಲಿ ಗಾಳಿ ಬೀಸಿರೆ ಸೋಮವಾರಪೇಟೆಲಿ ಚಳಿ. ಹಂಗೆ ಇರುವ ಸೊಸೆ ಇವ್ಳು. ಬೆಳಿಗ್ಗೆ ಇವು ಏಳುದೋ ಬಿಸಿಲ್ ಬಂದ್ ಹಾಸಿಗೆಗೆ ಬಡಿಯೊಕು. ಎದ್ದವು ಅರ್ಧ ಗಂಟೆ ಸುಮ್ಮನೆ ಒಲೆ ಬುಡಲಿ ಕುದ್ದವೆ. ನಿದ್ದೆ ಮಾಡ್ಬ ಸುಸ್ತುಗಡ. ವರ್ಷದ ಸೌದೆ ಮಾಡುದು ಮಳೆಗಾಲ ಸುರಾದ ಮೇಲೆ. ಅಲ್ಲಿವರೆಗೆ ಅಲ್ಲಿ ಮೊದುವೆ ಇಲ್ಲಿ ಜಂಬರಂತ ತಿರುಗುದೊಂದೆ. ಕೊಟ್ಟುವ ಸದ್ದು ಕೇಳುವಲ್ಲಿಗೆಲ್ಲಾ ಕಾಲ್ ತೆಗಿತಾ ಇದ್ದವೆ. ಗಂಡನೂ ಹಂಗೆ ಹೆಣ್ಣೂ ಹಂಗೆ. ಒಂದ್ ತಕ್ಕಡಿಗೆ ಹಾಕಿರೆ ಸಮಾ ಆವೊ. ಇವೆಲ್ಲಾ ಬದುಕ್ ಮಾಡಿಕೆ ಇರೊವಾ ?

ಚಾಮೆವ್ವನ ಮಾತ್ ಕೇಳಿ ಕೇಳಿ ನಂಗೆ ಒಂಥರಾ ತಕುಪುಕು ಸುರಾತ್. ನಾ ಬೇರೆ ಅವ್ರ ಮನೆಗೆ ಹೋಗಿ ಸಿಕ್ಕಿ ಹಾಕೊಂಡೊಳೆ. ಚಾಮೆವ್ವನೋ ಆ ಮನೆ ಜನಕ್ಕೆಲ್ಲಾ ಬಯ್ತಾ ಉಟ್ಟು. ನನ್ನಿಂದಾಗಿ ಈ ಮನೇಲಿ ಜಗಳ ಆದುಬ್ಯಾಡಂತ ಗ್ಯಾನ ಮಾಡಿ "ಚಾಮೆವ್ವ ನೀವ್ ಸ್ವಲ್ಪ ಸಮಾಧಾನ ತಕಣೊಕು. ಈಗನ ಕಾಲದವು ಮಾಡುದು ನಿಮಿಗೆ ಸರಿ ಕಾಂಬಕಿಲ್ಲೆ. ನೀವು ಹೊಂದಿಕಂಡ್ ಹೋಗಿ. ನಾ ಇನ್ನೊಮ್ಮೆ ಬನ್ನೇಂತೇಳಿ ಹೊರಡ್‌ಕಾಕನ ನಾ ಬಯುಸಿದ್ದ ಕರಿಕಾಫಿನ ಸೊಸೆ ತಂದ್ ನನ್ನ ಮುಂದೆ ಕುಕ್ಕಿತ್. ಓಹೋ ಎಲ್ಲವೂ ರಾಂಗ್ ಆಗಿಯೊಳೋಂತೇಳಿ ಕೊಟ್ಟದ್‌ರ್ನ ಬೇಗ ಬೇಗ ಕುಡ್‌ದೆ. ಬೆಳಿಗೆ ಕಾಸಿದೋ ಏನೋ, ಜಂಡ್ ಜಂಡಾಗಿತ್ತ್.

ನಾ ಒಂದ್‌ಕ್ಷಣ ಗ್ಯಾನ ಮಾಡ್ದೆ. ಈ ಚಾಮೆವ್ವಂಗೆ ಇಷ್ಟ್ ಸಿಟ್ಟ್ ಇವರ ಮೇಲೆ ಯಾಕಾಗಿ ? ಏನೋ ಚಿಂತೆ ತುಂಬಿ ಕಂಡುಟ್ಟು. ಚಾಂಪ ಯಾಗಬಾದ ಚಾಮೆವ್ವಂತ ಕೇಳ್‌ಕನ ಚಾಮೆವ್ವನ ಕಣ್ಣ್‌ಲಿ ನೀರ್ ಬಂದದರ್ನ ನಾ ನೋಡ್ದೆ. ನನ್ನ ಮನ್ಸಿಗೆ ತುಂಬಾ ಬೇಜಾರಾತ್. ಜೋಡಿ ಹಕ್ಕಿಗ ಕೊನೆವರೆಗೂ ಜೋಡಿಯಾಗೇ ಇರೋಕು. ಅಪ್ಪನ ಒಂದ್ ಕಡೆ ಅವ್ವನ ಒಂದ್ ಕಡೇಂತ ಮಕ್ಕ ಪಾಲ್ ಮಾಡಿಕಂಬಕಾಗದ್. ಅವು ಸಾಯೋ ಮುಟ್ಟ ಒಟ್ಟಿಗೆ ಇದ್ದರೆ ಅವರ ಬಾಳೊಂದು ಚಿನ್ನ. ಮನಶಾಸ್ತ್ರದ ಪ್ರಕಾರ ಅಜ್ಜಿಯಾದರೂ ಅವು ದಂಪತಿಗಳೇ. ಅವು ಕೊನೆವರೆಗೂ ಜೊತೆಯಾಗಿಯೇ ಇರೊಕು. ಜಗಳಾಡಿಕಂಡ್, ತಮಾಷೆ ಮಾಡಿಕಂಡ್ ಅವು ಕಾಲ ಕಳೆಯಲಿ. ಅವರ ಆಯುಷ್ಯ ಸೊಲ್ಪ ಹೆಚ್ಚುದು.

ನಾವು ಇನ್ನಾರೂ ಅಜ್ಜಿ ಅಜ್ಜನ ಬೇರೆ ಬೇರೆ ಮಾಡಿ ಸಾಂಕುದು ಬ್ಯಾಡ. ●

ನಗೆ ಹನಿಗಳು

ಉಸಾರಿಲ್ದೆ ಹಾಸಿಗೆ ಹಿಡ್‌ದಿದ್ದ ಅಪ್ಪ ಮಂಜನೊಟ್ಟಿಗೆ ಹೇಳ್ತ್

"ನಿನ್ನವ್ವ ನೀರ್ ತಾಕೆ ಹೋಗಿ ಬಾತೇ ಇಲ್ಲೆಲ್ಲಾ, ನಂಗೆ ಎದೆನೋವ್ ತಡಿಯುಕೆ ಬತ್ತ್."

ಮಂಜ : ಅವ್ವ ಅಲ್ಲಿ ಪೆನ್ನ್ ಹುಡುಕ್ತಾ ಒಳೊ, ವಿಲ್ ಪತ್ರಕೆ ನಿಮ್ಮುಕಲೆ ಸೈನ್ ಹಾಕ್ಸಿಕೆ.

❁ ❁ ❁

ಪುಟ್ಟು : ಏನ್‌ಯಾ ಒಂತರಾ ಬೇಜಾರ್ಲಿ ಇದ್ದಂಗೆ ಕಂಡದೆ ?

ಕಿಟ್ಟು : ಎಂತ ಹೇಳ್ಬ್ ಹೇಳ್, ನಂಗೂ ಹೆಣ್ಣಿಗೂ ಜಗಳ ಆಗ್ಬುಡ್ತ್‌ರ

ಪುಟ್ಟು : ಮತ್ತೇನಾತ್ ?

ಕಿಟ್ಟು : ಆದು ಏನ್ ಒಂದ್ ತಿಂಗ ಅವಳ್ ನನ್ನೊಟ್ಟಿಗೆ ಮಾತಾಡ್ಕಿಲೇತಹೇಳ್ತ್

ಪುಟ್ಟು : ಅದ್ಕೆ ನೀನ್ಯಾಕೆ ಬೇಜಾರ್ ಮಾಡ್ದು ?

ಕಿಟ್ಟು : ಆ ಒಂದ್ ತಿಂಗ ಇಂದಿಗೆ ಮುಗ್ದೇ ಹೋತಲ್ಲಾಂತ.

● **ಎಂ. ಇ. ಮುಹಮ್ಮದ್,** ಮಡಿಕೇರಿ.

ನಾಕ್ ಜನ ಪೊಟ್ಟಂಗ

ಒಂದು ಊರ್ಲಿ ಗಂಡ, ಹೆಂಡ್ತಿ, ಅತ್ತೆ ಮಾವ ನಾಕು ಜನ ಇದ್ದೊ. ಅವ್ಕೆ ಯಾರಿಗೆ ಕಿವಿನೇ ಕೇಳ್ದುಲೇತ. ಅವರ ಕತೆನ ನೀವೆಲ್ಲ ಸ್ವಲ್ಪ ಕೇಳಿ.

ಗಂಡ ಕೆಂಚ ಬೆಳ್ಗಿ ಆರು ಗಂಟೆಲಿ ಎರ್ಡ್ ಎತ್ತುಗಳ ಹೂಡಿಕೆ ಗದ್ದೆಗೆ ಹೊಡ್ಕಂಡು ಹೋತು. ನೊಗ ನೇಗಿಲ್ ಎಲ್ಲ ಕಟ್ಟಿ "ಹರನಿ...ಹರಾ...ಹೀ, ಹೀ. ಹೇಳಿಕ್ಕಂಡು ಹೂಡ್ತ ಇತ್ತು "ಎಂತ ಸಾವು

ಪಟ್ಟಡ ಭರತ್‌ಕುಮಾರ್, ಮದ್ದೂರ್

ಎತ್ತುಗತಾ. ಹರತೇಳಿರೆ ಎಡಕ್ಕೆ ತಿರುಗುವೆ. ಹೀ ತೇಳಿರೆ ಬಲಕ್ಕೆ ತಿರುಗುವೆ ನಿಮ್ಮ ದೊಂಡೆ ಕಟ್ಟಿ ಹೋಕೆ. ಯಾರಾರ್ ಕೇಳಿಕ್ಕಂಡ್ ಬಂದರೆ ನಿಮ್ಮ ಮಾರಿಬುಟ್ಟನೆ ನಿಮ್ಮ ರಗಳೇನೆ ಬೇಡಾಂತ ಗೊಣಗುತ್ತಾ ಇತ್ತು.

ಅಸ್ಟೊತ್ತಿಗೆ ಒಬ್ಬ ಮಳಯಾಳದಂವ ಮಡಿಕೇರಿಗೆ ಹೋಕೆ ದಾರಿ ಗೊತ್ತಾಗದೆ "ಓ ಅಣ್ಣರೇ...ಮಡಿಕೇರಿಗೆ ಪೋಗಣು ವಲಿ ಎವಡೆ" ಎಂದು ಕೆಂಚನತ್ರ ಕೇಳ್ತ್. [ಮಡಿಕೇರಿಗೆ ಹೋಕೆ ದಾರಿ ಯಾವ್ದ್] ಅದಕ್ಕೆ ಕೆಂಚ "ಓ...ಎಂತಾ? ಸ್ವಲ್ಪ ಜೋರಾಗಿ ಹೇಳಿ ನಂಗೆ ಕಿವಿನೇ ಕೇಳ್ದುಲೇತ್ತಾ. ಸ್ವಲ್ಪ ಹೊತ್ತು ಬಿಟ್ಟು ಅಂವ "ಮಡಿಕೇರಿಗೆ ಪೋಗಣು ವಲಿ ಎವಡೆ" ಎಂದು ಪುನಃ ಕೇಳ್ತ್. ಕೆಂಚ ನನ್ನ ಎತ್ತುನ ರೇಟು ಕೇಳ್ತ ಒಳತ್ತೇಳಿ ಓ...ಅದಾ...ಬನ್ನಿ ಅಣ್ಣರೆ ನಾನು ಈಗ ಗೇನ ಮಾಡ್ಕಂಡೇ ಇದ್ದೆತಾ. ಎಂದು ಹೇಳಿ ಎತ್ತುನ "ಹೊ...ಹೋ..." ಎಂದು ಹೇಳಿ ನಿಲ್ಸಿ, ಗದ್ದೆ ಏರಿ ಮೇಲೆ ಬಂದ್ ನಿಂತತು ಕೆಂಚ. "ನೋಡಿ ಅಣ್ಣರೆ ಎತ್ತುಗ ಚೆನ್ನಾಗಿ ಹೂಡಿಕೆ ಬಂದವೆಂತಾ. ಈ ಬಿಳಿ ಎತ್ತ್‌ಗೆ 1500 ರೂ. ಈ ಕರಿಯಣ್ಣಗೆ 1300 ರೂ. ನಾನ್ ಬರಿ ಕಮ್ಮಿನೇ ಹೇಳ್ತುತಾ. ಎಂದು ಹೇಳ್ತು ಕೆಂಚ. ಅದಕ್ಕೆ ಮಳಯಾಳಿ "ಇನ್ ಅವಲ್ಲ ಪರನೆದು ಮಡಿಕೇರಿಗೆ ಪೋಗಣು ವಲಿ ಎವಡೆ" ಎಂದು ಜೋರಾಗಿ ಕಿರ್ಚಿ ಹೇಳ್ತ್. ಅದಕ್ಕೆ ಕೆಂಚ "ಆತಣ್ಣ ನೀವು ಹೇಳ್ದಂಗೆ ಸ್ವಲ್ಪ ಕಮ್ಮಿ ಮಾಡ್ನೆ ಬಿಳಿ ಎತ್ತುಗೆ 1450 ಕೊಡಿ ಮತ್ತೆ ಕರಿಯಣ್ಣಗೆ 1250 ಕೊಡಿ". "ಅಣ್ಣರೆ ವಲಿ......ವಲಿ......ಎವಡೆ" ಎಂದು ಕಿವಿ ತಮಟೆ ಒಡೆದು ಹೋಗುವಂಗೆ ಕಿರ್ಚಿ ಹೇಳ್ತ್. ಅದಕ್ಕೆ ಕೆಂಚ ಆಕೇಲೆ ಐವತ್ತು ರೂಪಾಯಿಕ್ಕಿಂತ ಕಮ್ಮಿ ಮಾಡ್ತೇಲೆ. ಬೇಕಾರೆ ತಕಣಿ ಬಿಡಿ." ಎಂದು ಹೇಳ್ತ್. ಆಗ ಮಳೆಯಾಳದಂವ ಇವನತ್ರ ಜಾಸ್ತಿ ಮಾತಾಡ್ರೆ ಆಕೇಲೆ, ಬನ್ನಿ ತೇಳಿ ಹೊರ್ಟತ್. ನಾಳೆ ಬಂದರೆ, ಆಗಲಿ ಎಂದು ಕೆಂಚ ಸುಮ್ಮನಾತು.

ಇತ್ತ ಕೆಂಚನ ಹೆಂಡ್ತಿ ಅತ್ತೆಕೊಟ್ಟ 4 ರೊಟ್ಟಿನ ಬುತ್ತಿ ಕಟ್ಕಂಡ್ ದಾರಿಲಿ ಬರ್ತಾ ಇರುಕನ ನಾನು ಒಂದ್ ರೊಟ್ಟಿನ ತಿಂದ್ ಗಂಡಗೆ ಮೂರೇ ರೊಟ್ಟಿ ಕಳ್ಸಿದುತ ಹೇಳಿರೆ ಆತುತೇಳಿ ಒಂದು ರೊಟ್ಟಿನ ತಿಂದ್‌ಕಂಡ್ ಕೆಂಚನ ಹತ್ತಿರ ಬಂದ್ "ಬನ್ನಿ ಊಟ ಮಾಡಿತಾ" ಗಂಡಗೆ ಕೈ ಸನ್ನೆ ಮಾಡಿ ಕರ್ತ್. ಕೆಂಚ "ಈಗ ಬಂದೆ. ಅಲ್ಲ ಕೆಂಚಿ ಈ ಹೂಡುವ ರಗಳೆ ತಪ್ಪಿತು. ಒಬ್ಬ ಎತ್ತ್ ಕೇಳಿಕಂಡ್ ಗಿರಾಕಿ ಬಂದಿತ್ ಅವಂಗೆ ಒಂದು ಎತ್ತಿಗೆ 1450 ರೂ. ಮತ್ತೆ ಇನ್ನೊಂದಕ್ಕೆ 1250ಕ್ಕೆ ಹೇಳಿ ಒಪ್ಪಿದೆ. ಅವ ನಾಳೆ ಬಂದು ತಕ್ಕೊಂಡು ಹೋದೆಗಡ. ಹೆಂಗಾರು ಆತು ಹೂಡವ ರಾಮಾಯಣ ತಪ್ಪಿತು." ಅದಕ್ಕೆ ಕೆಂಚಿ "ಅಂ ಎಂತಾ ನಾನು ರೊಟ್ಟಿ ತಿಂದೆನಾ ? ನಿಮ್ಮ ಬಾಯಿ ಸುಮ್ಮನೆ ಇರ್ದುಲೇತಾ. ಅತ್ತೆ ಮೂರೇ ರೊಟ್ಟಿಕೊಟ್ಟದು ಸುಮ್ಮ ಸುಮ್ಮನೆ ನನ್ನ ರೊಟ್ಟಿ ತಿಂದದು ತೇಳಿರಲ್ಲ ನಿಮ್ಗೆ ಅತ್ತೆ ನತ್ರ ಹೇಳಿ ಬಯ್ಸದೆ ಬುಡಿ ಕೆಲೆ" ಎಂದು ಹೇಳಿ ರೊಟ್ಟಿನ ಏರಿ ಮೇಲೆ ಇಟ್ಟು ಮನೆಗೆ ಓಡಿ ಬಾತು.

ಇತ್ತ ಅತ್ತೆ, ಸೊಸೆ ಗದ್ದೆಕಡೆ ಹೋದ ಮೇಲೆ ಸೀರೆ ಉಟ್ಟುಕ್ಕಂಡು ನೆರಿ ಸರಿ ಪಡಿಸಿಕ್ಕಂಡು ಇರುಕನ "ಅತ್ತೆ...ಅತ್ತೆ.. ನೋಡಿ ನಿಮ್ಮ ಮಜ ನನ್ನ ಸುಮ್ಮ ಸುಮ್ಮನೆ ರೊಟ್ಟಿ ತಿಂದದುತ ಹೇಳ್ತ ಒಳ. ನೀವು ಕೊಟ್ಟದ್ 4 ರೊಟ್ಟಿ ಅದನ್ನ ಕೊಡುಕನ ಅಮ್ಮ 5 ರೊಟ್ಟಿ ಕೊಟ್ಟದು ನೀನೆಲ್ಲ ತಿಂದುಬುಟ್ಟದುತ್ತೇಳಿ ಬಾಯಿಗೆ ಬಂದಂಗೆ ನನ್ನ ಬಯ್ತಾ ಒಳ. ನೀವಾರು ಸ್ವಲ್ಪ ಬುದ್ಧಿ ಹೇಳಿತಾ" ಎಂದು ಅತ್ತೆ ಜೊತೆ ಹೇಳ್ತು. ಅದಕ್ಕೆ ಅತ್ತೆ "ಎಲಾ ಇವಳಾ...ನಿನ್ನ ಸೀರೇತಾ ಹೇಳಿಯಲ್ಲಾ ರಾಟೆ. ನೀಲಿ ಕಂಡದೆಲ್ಲ ನಿನ್ನದುತೇಳಿಯಲ್ಲ ನನ್ನ ಮದುವೆಗೆ ನಮ್ಮ ಅಮ್ಮ ಧಾರೆಗೆ ಕೊಟ್ಟ ಸೀರೆ ಇದು ನಿಂಗೆ ಮಾವನ ಹತ್ರ ಹೇಳಿ ಸರಿಯಾಗಿ ಬುದ್ದಿ ಕಲ್ಸಿನೆ." ಎಂದು ಅತ್ತೆ ಅಜ್ಜನತ್ರ ಓಡಿ ಬಾತು.

ಅಲ್ಲಿ ಅಜ್ಜ ಬಾರಿ ಕಳ್ಳ. ಬೆಂಕಿ ಕಾಸಿಕಂಡ್ ಒಲೆ ಮೇಲೆ ಇಟ್ಟ ಮುಡ್ಡಿ ಜೊತೆ ಮೊಟ್ಟೆ ಬೇಸಿಕ್ಕಂಡ್ ತಿಂದ್ ಮುಗ್ಸಿ ಕಾಕನ ಅಜ್ಜಿಯ ಬೊಬ್ಬೆ ಕೇಳಿ ತಿರುಗಿತು. "ನೋಡಿ ಇದ್ ಇವಳ ಸೀರೆಗಡ. ನನ್ನದುಂತಾ ಇವಳಿಗೆ ಹೇಳಿ. ಬರ್ತಾ ಬರ್ತಾ ಅವಳ ಆಟ ಜಾಸ್ತಿಯಾಗತುಟ್ಟು ಎರಡು ಪೂಜೆ ಮಾಡಿ ಆಗ ಗೊತ್ತಾದೆ" ಎಂದು ಅಜ್ಜನತ್ರ ಹೇಳ್ತು. ಅಜ್ಜ "ಎಂತ ಹೇಳಿಯ

[ಮುಂದಿನ ಪುಟ ನೋಡಿ]

ತಾಬೆದಾರಿಕೆ

ನಮ್ಮ ಊರ್‌ನ ಪದ್ಧತಿ ನೋಡಿ
ಬೇಸಿಗೆ ಕಾಲಲಿ ನಮ್ಮನ ನೋಡಿ
ಅಂಬುಲಿ ಗಂಜಿಗೆ ನೆಲವಾಂಗೆ ಪಜ್ಜಿ
ಹೇಳಿಕೆ ಆದುಲೆ ರುಚಿನ ನಿಮಿಗೆ

ಕೊವ್ಮೈಲಿ ಇರ್ದು ಒಣ್‌ಗಿಲ್ ಮೀನ್
ಸುಮ್ಮನೆ ಇರ್‌ಕೆ ಆದ್ ಏನ್ ।
ಮತ್ತ್ ಮೀನ್‌ನ ಹಾಕಿರೆ ಒಲೆಗೆ
ತಡೇಕೆ ಆಕಿಲೆ ವಾಸನೆ ನಿಮಿಗೆ ॥

ಕುಸ್‌ಲಕ್ಕಿ ಗಂಜಿಗೆ ಕಂಯುಳಿ ಪೊಜ್ಜಿ
ಅರ್‌ದ್ ಕೊಡುದು ನಮ್ಮ ಅಜ್ಜಿ ।
ಬೇಸಿಗೆ ಕಾಲಲಿ ಉಂಬೊದು ಅಂದರೆ
ಎಲ್ಲವುಕೆ ಇರುವ ಕುಷಿಗಾರಿಕೆ ॥

ಮದುವೆ ಅಂದರೆ ಮಕ್ಕಳಿಗೆ ಹಬ್ಬ
ತಿಂದ್ ಮಕ್ಕಳ ಹೊಟ್ಟೆ ಗಬ್ಬ ।
ಚಪ್ಪರ ಹಾಕುವೆ ಹನ್ನೆರಡ್ ಕಂಬ
ವಾಲಗ ಸದ್ದ್‌ಗೆ ನಾಯಿಗ ಮನೆ ಸುತ್ತ್

ಬೆಳ್‌ಕ್‌ನ ಹಬ್ಬಲಿ ಬಳೆ ಅಂಗ್‌ಡಿ
ಗೂಡೆಗೆ ಎಲ್ಲಾ ಹಬ್ಬಕೆ ಹೊರಡಿ ।
ಮಾವನ ಮಗಳ್ ಹಬ್ಬಕೆ ಬಂದರೆ
ಒಟ್ಟಿಗೆ ನಾನ್ ಬಾವೇ ಅಂದರೆ ॥

ಹಾಸಿಗೆ ಅಡಿಲಿ ಸುರಾಲ್ ಮಡ್‌ಗಿ
ಇಸ್ತ್ರಿ ಆಕುತ ಅದರ್‌ಲಿ ಮಲ್‌ಗಿ ।
ಹಾಕಂಡ್ ಹೋದೆ ಹಬ್ಬಕೆ ನೋಡಿ
ನೆಗಾಡ್ದೊ ಎಲ್ಲಾ ನನ್ನನೇ ನೋಡಿ ॥

ರೈತರ ಜೀವನ ಹಳ್ಳಿಲಿ ಇರುದು
ಚಟ್ಟೆಲಿ ಉಂಡ್ ಬದ್‌ಕಿದೊ ಅಂದ್ ।।
ಬಟ್ಲ್‌ನ ಕಂಡವು ಅಲ್ಲಾ ನಾವು
ಚಟ್ಟಲಿ ಹೊತ್ಕಂಡ್ ಹೋದುಲೆ ನಾವು ॥

● **ಕೂಡಕಂಡಿ ಪೊನ್ನಪ್ಪ,** ವಕೀಲರು ಮಡಿಕೇರಿ.

ಗದ್ದಳ (ಪಾರ್ಟಿ)

ಒವ್ಮೆ ನಮ್ಮ ಸೋಮಪಜ್ಜನೂ, ಅಜ್ಜಿನು ಡೆಲ್ಲಿಲಿರೋ ಮಜ ಸೊಸೆನ ನೋಡಿಕಂಡ್ ಬಾಕೆತ ಡೆಲ್ಲಿಗೆ ಹೋದೊ. ಅಪ್ಪ ಅಮ್ಮ ಬಂದದ್ ನೋಡಿ ಮಂಜಗೆ ಸೊಸೆಗೆ ಖುಷಿಯೋ ಖುಷಿ. ಸೊಸೆ ಅತ್ತೆ ಮಾವಂಗೆ ರಾತ್ರಿಗೆ ಊಟಕ್ಕೆ ಗದ್ದಳ ಎಲ್ಲ ಮಾಡ್ತ್. ಸೊಸೆಗೆ ಕನ್ನಡ, ಅರೆಭಾಷೆ ಬಾದುಲೆ. ಅವುಳ್ ಹಿಂದಿಲೇ ಮಾವಂಗೆ ಅತ್ತೆಗೆ ಹೇಳ್ತ್. ಶರ್‌ಮಾನೇಕಿ ಕೋಯಿ ಬಾತ್ ನಹಿ, ಆಪ್ ಕ ಗರ್ ಸಮಜ್‌ಕೆ ಕಾವೋ, ಕಾವೋ. ಅಂತ ಹೇಳ್ತ್ [ನಾಚಿಕೆ ಮಾಡಿಕಂಬಡಿ ನಿಮ್ಮ ಮನೆತೇಳಿ ಲಾಯಿಕ ತಿನ್ನಿತ] ಮಾವಂಗೆ ಸ್ವಲ್ಪ ಸ್ವಲ್ಪ ಹಿಂದಿ ಬಂದದೆ. ಮಾವಂಗೆ ಸೊಸೆ ಹೇಳ್ದ್ ಕೇಳಿ ಖುಷಿ ಆತ್. ವಾಪಸ್ ಮಡಿಕೇರಿಗೆ ರಜೇಲಿ ಇಬ್ಬರು ಬಾಕು ತೇಳಿ ಮನೆಗೆ ಹೊರ್‌ಟೋ. ಮಂಜನು ಸೊಸೆನು ರಜ ಮಾಡಿಕಂಡ್ ಮಡಿಕೇರಿಗೆ ಬಂದೋ. ಆಗ ಮಾವನು ಅತ್ತೆನು ಅವುಕೆ ಲಾಯಿಕ ಗದ್ದಳ ಎಲ್ಲಾ ಮಾಡ್ದೋ. ಮಾವಂಗೆ ಸೊಸೆ ಜೊತೆ ಹಿಂದಿಲೇ ಮಾತಾಡಿಕೆ ಖುಷಿ. ಊಟ ಮಾಡ್‌ಕಾಕನ ಮಾವ ಸೊಸೆಗೆ ಹೇಳ್ತ್ ಶರಮ್ ನಹಿ ಆತಿ. ಏ ತೇರಿ ಬಾಪ್ ಕ ಗರ್ ಕ್ಯಾ. ಕಾವೋ ಕಾವೋ ಅಂತ ಹೇಳ್ತ್ [ನಾಚಿಕೆ ಆಲೆನಾ, ಇದೇನ್ ನಿನ್ನ ಅಪ್ಪನ ಮನೆನ ? ತಿನ್ನ್ ತಿನ್ನ್] ಸೊಸೆಗೆ ಈ ಮಾತ್ ಕೇಳಿ ನಾಚಿಕೆ ಆಗಿ ಬುಡ್ತ್, ಅತ್ತೆ ಮಾವ ಹಿಂಗೆ ಹೇಳಿಕಂಡ್ ಬಡ್‌ಸ್‌ತಾನೇ ಒಳೋ. ಆ ಸೊಸೆಗೆ ಹೆಂಗೆ ಆಗಿರ್‌ಬಡ ಗ್ಯಾನ ಮಾಡಿ ತಿಂದ ಅನ್ನ ಗಂಟ್ಲ್‌ಂದ ಕೆಳ್‌ಗೆನೇ ಇಳ್‌ದಿರ್‌ಕಿಲೇ.

● **ಅಚ್ಚಲ್ಪಾಡಿ ಬೀನ ಗೋಪಾಲ,** ಮಡಿಕೇರಿ

[ಹಿಂದಿನ ಪುಟದಿಂದ]
ಮುಂಡೆ ನಾನು ಮಡ್ಡಿ ಜೊತೆ ರೊಟ್ಟಿ ಬೇಸಿ ತಿಂದೆನಾ...ನಿನ್ನ ದೊಂಡೆ ವಡ್ದ್ ಹೋಗ. ಸುಮ್ಮ ಸುಮ್ಮನೆ ನನ್ನ ಮೇಲೆ ಹೇಳಿಯು. ನಿನ್ನ ಸೊಂಟ ಮುರ್ದನೆ. ನಿಂಗೆ ಸಾಯುವ ಕಾಲ ಬಾಕೆ ಬಾತ್. ಎಲ್ಲಿ ದೊಣ್ಣೆ ತೇಳಿ ದೊಣ್ಣೆನ ತಕ್ಕಂಡ್ ಅಜ್ಜಿಗೆ ಹೊಡಿತಾ ಉಟ್ಟು. ಆಗ ಅಜ್ಜಿ "ಅಯ್ಯೋ ನಾನ್ ಸತ್ತೆ" ನನ್ನ ಕೊಂದುಬುಟ್ಟೊ, ಬನ್ನಿನೇ ಯಾರಾರ್ ಬುಡ್ಸಿನೇ. ಅಯ್ಯೋ ಅಯ್ಯೋ ತಾ ಕಿರ್ಚ್ಚುತಾ ಉಟ್ಟುಗಡ ನೀವಾರು ಅಜ್ಜಿಗೆ ಹೊಡಿಯದೆ ಇರ್ಕೆ ಹೇಳಿರಲಾ !

K.R.N.N. 240

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-12 Published at Mysore, Editor PATTADA. P. SHEELAMANI, 322, Bhogadi Circle, Hinkal Post, Mysore-570017 Phone : 516771